ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 126 RNI Number : KNKAN/25/A2770 15-05-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :126 ರಾಯಚೂರು 15-05-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ಚಲಿಸುತ್ತಿದ್ದ ಸ್ಲೀಪರ್ ಬಸ್‌ನಲ್ಲಿ ಮಹಿಳೆ ಮೇಲೆ ಗ್ಯಾಂಗ್ ರೇಪ್; ಚಾಲಕ, ಕಂಡಕ್ಟರ್ ಅರೆಸ್ಟ್

ನವದೆಹಲಿ: ಚಲಿಸುತ್ತಿದ್ದ ಖಾಸಗಿ ಸ್ಲೀಪರ್ ಬಸ್‌ನಲ್ಲಿ 30 ವರ್ಷದ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದ ಘಟನೆ ದೆಹಲಿಯ ನಂಗ್ಲೋಯಿ ಪ್ರದೇಶದಲ್ಲಿ ನಡೆದಿದೆ. ಪ್ರಕರಣ ಸಂಬಂಧ ಬಸ್ ಚಾಲಕ ಮತ್ತು ಕಂಡಕ್ಟರ್‌ನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಆರೋಪಿಗಳು ಸೋಮವಾರ ತಡರಾತ್ರಿ ಈ ಕೃತ್ಯ ಎಸಗಿದ್ದಾರೆ. ಪಿತಾಂಪುರದ ಕೊಳೆಗೇರಿಯಲ್ಲಿ ವಾಸಿಸುವ ಮಹಿಳೆ ಮಂಗೋಲ್‌ಪುರಿಯ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದು, ಕೆಲಸ ಮುಗಿಸಿ ಕಾಲ್ನಡಿಗೆಯಲ್ಲಿ ಮನೆಗೆ ಹಿಂದಿರುಗುತ್ತಿದ್ದಾಗ ಈ ಘಟನೆ ಸಂಭವಿಸಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸರಸ್ವತಿ ವಿಹಾರ್‌ನ ಬಿ - ಬ್ಲಾಕ್ ಬಸ್ ನಿಲ್ದಾಣಕ್ಕೆ ಸಂತ್ರಸ್ತ ಮಹಿಳೆ ಬಂದಿದ್ದರು. ಈ ವೇಳೆ, ಅಲ್ಲೇ ನಿಂತಿದ್ದ ಸ್ಲೀಪರ್ ಬಸ್‌ನ ಬಾಗಿಲಲ್ಲಿದ್ದ ವ್ಯಕ್ತಿಯನ್ನು ಸಮಯ ಎಷ್ಟಾಗಿದೆ ಎಂದು ಕೇಳಿದ್ದರು. ಆಗ ಆತ ಸಹಾಯ ಮಾಡುವ ಬದಲು, ಮಹಿಳೆಯನ್ನು ಬಸ್ಸಿನೊಳಗೆ ಬಲವಂತವಾಗಿ ಎಳೆದುಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಬಸ್‌ನೊಳಗೆ ಎಳೆದುಕೊಂಡ ಬಳಿಕ ತಕ್ಷಣವೇ ಬಾಗಿಲನ್ನು ಮುಚ್ಚಿದ್ದಾರೆ. ನಂತರ ಸುಮಾರು ಎರಡು ಗಂಟೆಗಳ ಕಾಲ 7 ಕಿಮೀವರೆಗೆ ಬಸ್ ಓಡಿಸಿದ್ದಾರೆ. ಈ ವೇಳೆ, ಇಬ್ಬರು ಆರೋಪಿಗಳು ಅತ್ಯಾಚಾರ ಮಾಡಿದ್ದಾರೆ ಎಂದು ಮಹಿಳೆ ಹೇಳಿಕೆ ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಗಿನ ಜಾವ 2 ಗಂಟೆಯ ಸುಮಾರಿಗೆ ಗಾಯಗೊಂಡ ಸ್ಥಿತಿಯಲ್ಲಿ ನನ್ನನ್ನು ಬಸ್‌ನಿಂದ ಹೊರಗೆಸೆದು ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ಮಹಿಳೆ ಆರೋಪಿಸಿದ್ದಾರೆ. ಬಸ್ ಪರದೆಗಳನ್ನು ಹೊಂದಿದ್ದರಿಂದ ಒಳಗಡೆ ಏನಾಗುತ್ತದೆ ಎಂಬುದು ಹೊರಗಡೆಯವರಿಗೆ ಕಾಣಿಸಿಲ್ಲ. ಘಟನೆ ಬಳಿಕ ಸಂತ್ರಸ್ತೆ ದೂರು ನೀಡಿದ್ದಾರೆ ಎಂದು ಪೊಲೀಸರು ಪ್ರತಿಕ್ರಿಯೆ ನೀಡಿದ್ದಾರೆ.

ಸಂತ್ರಸ್ತೆಯ ದೂರಿನ ಆಧಾರಿಸಿ ರಾಣಿ ಬಾಗ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಉಮೇಶ್ ಮತ್ತು ರಾಜೇಂದ್ರ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಸದ್ಯ ಜೈಲಿನಲ್ಲಿ ಇರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೃತ್ಯಕ್ಕೆ ಬಳಸಿದ ಬಿಹಾರ ನೋಂದಣಿ ಸಂಖ್ಯೆ ಹೊಂದಿರುವ ಬಸ್ ಅನ್ನು ಸಹ ವಶಪಡಿಸಿಕೊಂಡು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿದೆ. ಸಂತ್ರಸ್ತ ಮಹಿಳೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿಕಿತ್ಸೆ ಗಾಗಿ ಆಸ್ಪತ್ರೆಗೆ ದಾಖಲಾಗುವಂತೆ ವೈದ್ಯರೂ ಸೂಚಿಸಿದರೂ ಸಂತ್ರಸ್ತೆ ನಿರಾಕರಿಸಿದ್ದಾರೆ ಎಂದು ತಿಳಿದುಬಂದಿದೆ. ಕ್ಷಯ ರೋಗದಿಂದ ಬಳಲುತ್ತಿರುವ ಪತಿ ಮತ್ತು ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿಯಿಂದಾಗಿ ಮನೆಯಿಂದಲೇ ಚಿಕಿತ್ಸೆ ಪಡೆಯುವುದಾಗಿ ಮಹಿಳೆ ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿಕೆ ನೀಡಿದ್ದಾರೆ.

ಪ್ರಕರಣವನ್ನು ಎಲ್ಲ ಕೋನಗಳಿಂದಲೂ ತನಿಖೆ ನಡೆಸಲಾಗುತ್ತಿದೆ. ತನಿಖೆಯ ಭಾಗವಾಗಿ ಹಣಕಾಸಿನ ವಿವಾದವನ್ನು ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮರುಕಳಿಸಿದ ನಿರ್ಭಯಾ ಪ್ರಕರಣ: ದೆಹಲಿಯಲ್ಲಿ 2012 ರಲ್ಲಿ ನಡೆದ ನಿರ್ಭಯಾ ಪ್ರಕರಣ ದೇಶಾದ್ಯಂತ ಭಾರೀ ಸಂಚಲನ ಸೃಷ್ಟಿಸಿತ್ತು. ಚಲಿಸುತ್ತಿದ್ದ ಬಸ್‌ನಲ್ಲಿ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ, ಕ್ರೂರ ಚಿತ್ರಹಿಂಸೆ ನೀಡಲಾಗಿತ್ತು. ಕೃತ್ಯದ ಬಳಿಕ ಗಂಭೀರ ಸ್ಥಿತಿಯಲ್ಲಿದ್ದ ಯುವತಿಯನ್ನು ಹೊರಗಡೆ ಎಸೆದು ಅಪರಾಧಿಗಳು ಪರಾರಿಯಾಗಿದ್ದರು. ಬಳಿಕ ಯುವತಿ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಳು. ಈ ಪ್ರಕರಣವನ್ನು ಖಂಡಿಸಿ ದೇಶಾದ್ಯಂತ ಪ್ರತಿಭಟನೆಗಳು ನಡೆದಿದ್ದವು.

ಅಧಿಕ ಜೇಷ್ಠಮಾಸ: ಮೇ.17 ರಿಂದ ಜೂ.18ರ ವರೆಗೆ ವಿಶೇಷ ಜ್ಞಾನಸತ್ರ

ರಾಯಚೂರು:ಮೇ,24- ನಗರದ ಶ್ರೀ ಜೋಡು ವೀರಾಂಜನೇಯ ದೇವಸ್ಥಾನ ಟ್ರಸ್ಟ್ ಮತ್ತು ದಾಸ ಸಾಹಿತ್ಯ ಪ್ರಾಜೆಕ್ಟ್ ತಿರುಮಲ ತಿರುಪತಿ ದೇವಸ್ಥಾನ ತಿರುಪತಿವತಿಯಿಂದ ಮೇ 17 ರಿಂದ ಜೂ.18ರ ವರೆಗೆ ಅಧಿಕ ಜೇಷ್ಠಮಾಸ ಪ್ರಯುಕ್ತ ವಿಶೇಷ ಜ್ಞಾನಸತ್ರ ಕಾರ್ಯಕ್ರಮವನ್ನು ನಗರದ ಶ್ರೀ ಜೋಡು ವೀರಾಂಜನೇಯ ದೇವಸ್ಥಾನದಲ್ಲಿ ಆಯೋಜಿಸಲಾಗಿದೆ ಎಂದು ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ದಾನಪ್ಪ ಯಾದವ ಹೇಳಿದರು.



ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೇ 17 ರಂದು ಸಂಜೆ 5:30 ಜ್ಞಾನ ಸತ್ರ ಉದ್ಘಾಟನೆಯನ್ನು ಶ್ರೀ ಸುಬುಧೇಂಧ್ರ ತೀರ್ಥ ಶ್ರೀಪಾದಂಗಳವರು ಮಂತ್ರಾಲಯ ಮಠ ಹಾಗೂ ಶ್ರೀ ವಿದ್ಯಾವಲ್ಲಭತೀರ್ಥ ಶ್ರೀಪಾದರು ಕಾಣೆಯೂರು ಮಠ ಉಡುಪಿ ನೆರವೇರಿಸಿ ಅನುಗ್ರಹ ಸಂದೇಶ ನೀಡಲಿದ್ದಾರೆ.

ಮೇ 17 ರಿಂದ ಜೂ.15ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಭಕ್ತರು ಆಗಮಿಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.ಈ ಸಂದರ್ಭದಲ್ಲಿ ಕಾರ್ಯದರ್ಶಿ ಡಾ.ವೆಂಕಟೇಶ ನವಲಿ, ಕಾರ್ಯಾಧ್ಯಕ್ಷ ವೇಣುಗೋಪಾಲಾಚಾರ್ಯ ಇನಾಮದಾರ್, ದೇಶಪಾಂಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನೀಟ್ ಪರೀಕ್ಷೆ ಅಕ್ರಮ ಎನ್‌ಟಿಎ ರದ್ದಿತಿಗೆ ಪ್ರತಿಭಟನೆ

ರಾಯಚೂರು, ಮೇ.14-

ನೀಟ್ ಪರೀಕ್ಷೆ ಅವ್ಯವಹಾರ ಹಿನ್ನೆಲೆಯಲ್ಲಿ ಎನ್ ಟಿ ಎ ರದ್ದುಪಡಿಸಬೇಕು ಎಂದು ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಸ್ ಆಫ್ ಸ್ಟೂಡೆಂಟ್ ಆಫ್ ಆರ್ಗನೈಸೇಶನ್ ಮುಖಂಡರು ಪ್ರತಿಭಟನೆ ನಡೆಸಿದರು. ನಗರದ ಟಿಪ್ಪು ಸುಲ್ತಾನ್ ಉದ್ಯಾನವನದಲ್ಲಿ ಪ್ರತಿಭಟನೆ ನಡೆಸಿ ಕೇಂದ್ರ ಸರಕಾರಕ್ಕೆ ಒತ್ತಾಯಿಸಿದರು.ನೀಟ್ ಠಾಣೆಯಲ್ಲಿ ಅನೇಕ ಅವ್ಯವಹಾರಗಳು ಇತ್ತೀಚೆಗೆ ಬೆಳಕಿಗೆ ಬಂದಿದೆ. ಪದೇ ಪದೇ ಮರುಕಳಿಸುತ್ತಿರುವ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ದೇಶದ ವಿದ್ಯಾರ್ಥಿಗಳು, ಪಾಲಕರು ಹಾಗೂ ಶಿಕ್ಷಕರನ್ನು ಅಪಾರ



ಆತಂಕಕ್ಕೆ ದೂಡಿದೆ.ಮೇ 3ರಂದು ನಡೆದ ನೀಟ್ ಯುವ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ. ಪ್ರಶ್ನೆ ಪತ್ರಿಕೆ ಸೋರಿಕೆಯಾದ ಪರಿಣಾಮ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಎನ್ ಟಿ ಎ ಪ್ರಕಟಿಸಿದೆ.ಇದು ಕೇವಲ ಒಂದು ಪರೀಕ್ಷಾ ಸಂಸ್ಥೆಯ ವೈಫಲ್ಯವಲ್ಲ; ಇದು ಲಕ್ಷಾಂತರ ಪ್ರಾಮಾಣಿಕ ವಿದ್ಯಾರ್ಥಿಗಳ ಬೆವರು ಮತ್ತು ಕನಸುಗಳ ಮೇಲೆ ನಡೆದ ಅನ್ಯಾಯವಾಗಿದೆ ಕೇವಲ ಮೂರು ವರ್ಷಗಳಲ್ಲಿ ಎರಡನೇ ಬಾರಿಗೆ, ವೈದ್ಯಕೀಯ ಶಿಕ್ಷಣದ ಕನಸು ಹೊತ್ತವರ ಆಶೋತ್ತರಗಳಿಗೆ ಧಕ್ಕೆಯುಂಟಾಗಿದೆ. ಈ ಪ್ರಕರಣಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ದೇಶದ ಜನರ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ. ಈ ವೈಫಲ್ಯವು ವಿದ್ಯಾರ್ಥಿಗಳಲ್ಲಿ ತೀವ್ರ ಆತಂಕ ಮತ್ತು ಪತಾಕೆಯನ್ನು ಮೂಡಿಸಿದೆ.ಆದ್ದರಿಂದ ವಿದ್ಯಾರ್ಥಿಗಳ ಭವಿಷ್ಯವನ್ನು ಆತಂತ್ರಕ್ಕೆ ದೂಡಿರುವ ಎನ್ ಟಿ ಎ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ನಿಮ್ಮಲ್ಲಿ ವಿನಂತಿಸುತ್ತೇವೆ. ಸಂಸ್ಥೆಯನ್ನು ತಕ್ಷಣವೇ ವಜಾಗೊಳಿಸಿ ಪಾರದರ್ಶಕವಾಗಿ ಮತ್ತು ಸುರಕ್ಷಿತವಾಗಿ ಪರೀಕ್ಷೆಗಳನ್ನು ನಡೆಸುವಲ್ಲಿ ಪದೇ ಪದೇ ವಿಫಲವಾಗಿ ದೇಶದ ನಂಬಿಕೆಯನ್ನು ಕಳೆದುಕೊಂಡಿರುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಬಸವರಾಜ ವಿದ್ಯಾರ್ಥಿಗಳು ಸೇರಿದಂತೆ ಉಪಸ್ಥಿತರಿದ್ದರು.

ರಾಜಕುಮಾರ ದೊಡ್ಡಮನಿ ಅಲಿಯಾಳ ಜೈಲಿನ ಅಧಿಕ್ಷಕರಾಗಿ ಮುಂಬಡ್ತಿ

ಕರ್ತವ್ಯದಲ್ಲಿ ಕೋಪ, ತಾಪ ಸಹಜ, ಆದರೂ ತಾಳ್ಮೆ ಮುಖ್ಯ : ಹಿರೇಮನಿ

ರಾಯಚೂರು,ಮೇ.14-

ನಗರದ ಜಿಲ್ಲಾ ಕಾರಾಗೃಹದ ಎದುರಿಗಿರುವಂತ ಜೈಲ್ ಸಿಬ್ಬಂಧಿಗಳ ವಸತಿಗೃಹದ ಆವರಣದಲ್ಲಿ ಜಿಲ್ಲಾ ಕಾರಾಗೃಹ ಹಾಗೂ ಸುಧಾರಣ ಕೇಂದ್ರದ ಅಧೀಕ್ಷಕರಾದ ಅನಿತಾ ಹಿರೇಮನಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾರಾಗೃಹದಲ್ಲಿ ಸಹಾಯಕ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ರಾಜಕುಮಾರ ದೊಡ್ಡಮನಿಯವರು ಅಲಿಯಾಳದ ಕಾರಾಗೃಹದ ಅಧಿಕ್ಷಕರಾಗಿ ಮುಂಬಡ್ತಿ ಹೊಂದಿದ





ಅವರಿಗೆ ಬಿಳ್ಕೊಡುಗೆ ಹಾಗೂ ಸನ್ಮಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಸಂತೋಷಿಯವರ ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಮುಂಬಡ್ತಿ ಹೊಂದಿದ ರಾಜಕುಮಾರ ದೊಡ್ಡಮನಿ ಧರ್ಮಪತ್ನಿ ಜಯಶ್ರೀ ದಂಪತಿಗಳಿಗೆ ಕಾರಾಗೃಹದ ಅಧಿಕ್ಷಕರಾದ ಅನಿತಾ ಹಿರೇಮನಿ, ಸಿಬ್ಬಂಧಿಗಳು ಹಾಗೂ ಸಪ್ತಸ್ವರ ಕರೋಕೆ ತಂಡದವರಿಂದ ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ನಂತರ ಕರಾಗೃಹದ ಸಿಬ್ಬಂಧಿ ವಿಜಯಕುಮಾರ ಕುದರಿಯವರು ಮುಂಬಡ್ತಿ ಹೊಂದಿದ ದೊಡ್ಡಮನಿಯವರಿಗೆ ವಿಶೇಷವಾದ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ನಂತರ ಮಾತನಾಡಿದ ದೊಡ್ಡಮನಿಯವರು ರಾಯಚೂರು ನಗರದಲ್ಲಿ ಬಿಸಿಲು ಜಾಸ್ತಿ ಆದರೆ ರಾಯಚೂರು ನಗರವಿರಬಹುದು ಜಿಲ್ಲೆಯ ಜನರಿರಬಹುದು ಅವರ ಮನಸ್ಸು ಮಾತ್ರ ತುಂಬಾ ತಂಪು, ಅಂದ್ರೆ ಪ್ರಕೃತಿಕವಾಗಿ ಎಷ್ಟೇ ಬಿಸಿಲಿದ್ದರು ಜನರು ಮಾತ್ರ ಮಾತೃ ಹೃದಯದವರು, ಆದುದರಿಂದ ರಾಯಚೂರು ನನಗೆ ತವರು ಮನೆ ಇದ್ದಂತೆ ನಾನು ಯಾವ ಜಿಲ್ಲೆ ಹೋದರೂ ಸಹಿತ ರಾಯಚೂರನ್ನು ಮಾತ್ರ ಮರೆಯುವುದಿಲ್ಲ ಯಾಕೆಂದರೆ ಜೈಲ್ ಅಧಿಕಾರಿಯಾಗಿದ್ದ ನನ್ನನ್ನು ಸಪ್ತಸ್ವರ ಕರೋಕೆ ತಂಡವು ನನ್ನನ್ನು ನನ್ನ ಧರ್ಮ ಪತ್ನಿಯನ್ನು ಒಬ್ಬ ಶ್ರೇಷ್ಠ ಸಂಗೀತ ಕಲಾವಿದರನ್ನಾಗಿ ಬೆಳೆಸಿದ್ದಾರೆ.

ಅನಿತಾ ಹಿರೇಮನಿ ಮೇಡಮ್ ನವರು ನನಗೆ ಒಬ್ಬ ಹಿರಿಯ ಅಧಿಕಾರಿಯಾಗಿದ್ದರೂ ಅವರನ್ನು ನನ್ನ ತಾಯಿಯ ಸ್ಥಾನದಲ್ಲಿ ಕಾಣುತ್ತೇನೆ ಅವರನ್ನು ಅಮ್ಮ ಎಂದು ಕರೆಯಲು ನನಗೆ ತುಂಬಾ

3ನೇ ಪುಟ.....

ಭಕ್ತರನ್ನು ಕೈಬೀಸಿ ಕರೆಯುತ್ತದೆ 2ನೇ ಮಸ್ಕಿ ಶ್ರೀಶೈಲ ಮಲ್ಲಿಕಾರ್ಜುನ ಬೆಟ್ಟ

ಮಸ್ಕಿ,ಮೇ.14-

ಆರಾಧ್ಯ ದೈವ ನಡೆದಾಡುವ ದೇವರು ಮಸ್ಕಿ ಬ್ರಹ್ಮ ರಾಮು ಮಲ್ಲಿಕಾರ್ಜುನ ದೇವಸ್ಥಾನ ಪ್ರಸಿದ್ಧವಾದ ದೇವಸ್ಥಾನ ಇತಿಹಾಸದಲ್ಲಿ ಹೆಸರು ಪಡೆದ ಮಲ್ಲಿಕಾರ್ಜುನ ದೇವಸ್ಥಾನ ವು ಭಕ್ತರನ್ನು ಕೈಬಿಸಿ ಕರೆಯುವ ಪುಣ್ಯ ಸ್ಥಾನವಾಗಿದೆ.



ಹೌದು ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಪ್ರತಿ ಸೋಮವಾರ ನಾಡಿನ ಭಕ್ತರು ವಿಶೇಷವಾಗಿ ಪೂಜೆ ಬೆಟ್ಟ ಹತ್ತುವುದು ಸಂಪ್ರದಾಯ ಕಡೆ ಸೋಮವಾರ ವಿಶೇಷ ಜಾತ್ರಾ ಮಹೋತ್ಸವ ಜರುಗುತ್ತದೆ.

ಈ ಬೆಟ್ಟದಲ್ಲಿ ಪೂಜ್ಯರು ಮಹಾತ್ಮರು ಮೌನ ಮಾಡಿ ತಮ್ಮ ಧ್ಯಾನವನ್ನು ಹೆಚ್ಚಿಸುವ ಸ್ಥಳವಾಗಿದೆ ಎಂದು ಪೂಜ್ಯರಿಂದ ಕೇಳಿ ಬಂದಿದೆ.

488 ಮೆಟ್ಟಿಲುಗಳಿದ್ದು ಸಮಿತಿಯವರು ಭಕ್ತರಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದಾರೆ ಹಾಗೂ ಭಕ್ತರಿಗೆ ವಿಶ್ರಾಂತಿ ಸ್ಥಳಗಳನ್ನು ಸ್ಥಳಗಳನ್ನು ನಿರ್ಮಿಸಿದ್ದಾರೆ.

ಸಿ ಸಿ ಕ್ಯಾಮೆರಾ ಗಳನ್ನು ಅಳವಡಿಸಿ ಭಕ್ತರಿಗೆ ವಿಶೇಷ ದರ್ಶನ ವ್ಯವಸ್ಥೆ ಕಲ್ಪಿಸಿದ್ದಾರೆ ಪ್ರತಿ ಸೋಮವಾರ ಭಕ್ತರು ವಿಶೇಷವಾಗಿ ಪೂಜೆ ಮಾಡುವುದು ಕಂಡುಬರುತ್ತದೆ.

ಹಾಗೆ ಇಲ್ಲಿ ವಿಶೇಷತೆ ಏನೆಂದರೆ ಕಲ್ಲಿನಲ್ಲಿ ಬಾರಿಸಿದರೆ ಗಂಟೆನಾದ ಕೇಳಿ ಬರುತ್ತದೆ.

ಬೆಲ್ಲದಮರಡಿ ಭಕ್ತರೊಬ್ಬರು ಶ್ರೀಶೈಲಕ್ಕೆ ಪಾದಯಾತ್ರೆ ಹೋದಾಗ ಶ್ರೀಶೈಲದಲ್ಲಿ ಭಕ್ತರ ಕನಸಿನಲ್ಲಿ ಪರಮಾತ್ಮನು ಬಂದು ನೀನು ಇಲ್ಲಿಂದ ಹೋಗುವಾಗ ತಿರುಗಿ ನೋಡಬೇಡ ಎಂದು ಹೇಳಿ ಅದೃಷ್ಯನಾದನಂತೆ.

ಆ ಭಕ್ತರು ಶ್ರೀಶೈಲದಿಂದ ಮಸ್ಕಿ ಗುಡ್ಡದಮೇಲೆ ಹಿಂದೆ ತಿರುಗಿ ನೋಡಿದಾಗ ಪರಮಾತ್ಮನ ಶ್ರೀಶೈಲ ಮಲ್ಲಿಕಾರ್ಜುನ ಪಾದ ಇಂದಿಗೂ ಮೂಡಿದ ಸಾಕ್ಷಿ ಉಳಿದಿವೆ ಎಂದು ಹಿರಿಯರು ಹೇಳುತ್ತಾರೆ ಹಾಗೆ ಪ್ರತ್ಯಕ್ಷವಾಗಿ ಇವೆ.

3ನೇ ಪುಟ.....

ವಕ್ಫ್ ಆಸ್ತಿ ಕಬಳಿಕೆ, ಅಕ್ರಮ ವಾಣಿಜ್ಯ ಮಳಿಗೆ ನಿರ್ಮಾಣ ಆರೋಪ : ತನಿಖೆಗೆ ಆಗ್ರಹ

ಮಾನ್ವಿ ,ಮೇ.14-

ಪಟ್ಟಣದ ವಕ್ಫ್ ಆಸ್ತಿ, ಖಬರಸ್ಥಾನ ಜಾಗ ಹಾಗೂ ಈದ್ಗಾ ಕುರಿತು ವಿರುದ್ಧ ಗಂಭೀರ ಆರೋಪಗಳು ಕೇಳಿಬಂದಿದ್ದು, ಸಂಪೂರ್ಣ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ



ಜರುಗಿಸುವಂತೆ ದಲಿತ ಸೇನೆ ವತಿಯಿಂದ ಜಿಲ್ಲಾ ವಕ್ಫ್ ಅಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ.

ಮಾನ್ವಿ ಪಟ್ಟಣದ ಸರ್ವೇ ನಂ.279/1 ರ ಒಟ್ಟು 15.39 ಎಕರೆ ಜಾಗದಲ್ಲಿ 11.07 ಎಕರೆ ಗಾಯರಾಣ (ನಮಾಜಗೇರಿ) ಹಾಗೂ 4.32 ಎಕರೆ ವಕ್ಫ್ ಬೋರ್ಡ್ ಈದ್ಗಾ ಆಸ್ತಿ ದಾಖಲಾಗಿದ್ದು, ಇದೇ ಸ್ಥಳದಲ್ಲಿ ಈದ್ಗಾ ಶಾದಿ ಮಹಲ್ ನಿರ್ಮಾಣಗೊಂಡಿದೆ. ಆದರೆ ಈದ್ಗಾ ಕಮಿಟಿಯ ಅಧ್ಯಕ್ಷರಾಗಿರುವ ಗಫೂರ್ ಸಾಬ್ ಅವರು ವಕ್ಫ್ ಆಸ್ತಿಯನ್ನು ಅಕ್ರಮವಾಗಿ ಕಬಳಿಸಿ, ನಕಲಿ ದಾಖಲೆಗಳನ್ನು ಸೃಷ್ಟಿಸಿ ಸುಖೊ ಬ್ಯಾಂಕ್ ಸೇರಿದಂತೆ ಹಲವು ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಮಾರಾಟ ಹಾಗೂ ಬಾಡಿಗೆ ಪಡೆಯುತ್ತಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಇದೇ ವೇಳೆ ಸಾರ್ವಜನಿಕ ದಾರಿಯ ಮೇಲೆಯೇ ಛಾವಣಿ ನಿರ್ಮಿಸಿಕೊಂಡು ವಾಸವಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ ಎಂದು ತಿಳಿಸಲಾಗಿದೆ.

ಬಡ ಮುಸ್ಲಿಂ ಸಮುದಾಯದ ಅನುಕೂಲಕ್ಕಾಗಿ ನಿರ್ಮಿಸಲಾದ ಹೈಟೆಕ್ ಈದ್ಗಾ ಶಾದಿ ಮಹಲ್‌ನ್ನು 17-02-2004 ರಂದು ಉದ್ಘಾಟಿಸಲಾಗಿದ್ದು, ಮದುವೆ ಹಾಗೂ ಇತರೆ ಕಾರ್ಯಕ್ರಮಗಳಿಗೆ ₹25 ಸಾವಿರದಿಂದ ₹30 ಸಾವಿರವರೆಗೆ ಹಣ ಪಡೆಯಲಾಗುತ್ತಿದೆ. ಆದರೆ ಇದುವರೆಗೆ ಯಾವುದೇ ಆಡಿಟ್ ವರದಿ ಅಥವಾ ಆದಾಯ-ಖರ್ಚಿನ ಲೆಕ್ಕಪತ್ರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿಲ್ಲ ಎಂಬ ಆರೋಪವೂ ಕೇಳಿಬಂದಿದೆ. ಅಲ್ಲದೆ ಇಸ್ಲಾಂ ನಗರದ ಮಸ್ಜಿದ್ ಹುದಾ ಹತ್ತಿರದ ಸರ್ಕಾರಿ ಖಬರಸ್ಥಾನ ಜಾಗದಲ್ಲಿಯೂ ಅಕ್ರಮವಾಗಿ ವಾಣಿಜ್ಯ ಮಳಿಗೆಗಳು ನಿರ್ಮಾಣಗೊಂಡಿದ್ದು, ವಕ್ಫ್ ಇಲಾಖೆಯ ಅನುಮತಿ ಇಲ್ಲದೇ ಲಕ್ಷಾಂತರ ರೂಪಾಯಿ ಮುಂಗಡ ಹಣ ಪಡೆದು

3ನೇ ಪುಟ.....

ಹಟ್ಟಿ ಚಿನ್ನದ ಗಣಿ ಕಂಪೆನಿ ಆಸ್ಪತ್ರೆಯ ಸುಧಾರಣೆ ಸಮಿತಿ ಸಭೆ

ಆಸ್ಪತ್ರೆಗಳ ಜ್ವಲಂತ ಸಮಸ್ಯೆಗಳ ಇತ್ಯರ್ಥಕ್ಕೆ ಆಗ್ರಹ

ಹಟ್ಟಿ, ಮೇ 13:

ಹಟ್ಟಿ ಚಿನ್ನದ ಗಣಿ ಕಂಪೆನಿ ಆಸ್ಪತ್ರೆಯ ಗುಣಮಟ್ಟ ಮತ್ತು ಆರೋಗ್ಯ ಸೇವೆಗಳನ್ನು ಮೇಲ್ದರ್ಜೆಗೇರಿಸುವ ಕುರಿತು ಆಸ್ಪತ್ರೆ ಸುಧಾರಣೆ ಸಮಿತಿ ಸಭೆಯನ್ನು ಬುಧವಾರ ಹಟ್ಟಿ ಚಿನ್ನದ ಗಣಿ ಆಸ್ಪತ್ರೆಯ ಕಾರ್ಯಾಲಯದಲ್ಲಿ ನಡೆಸಲಾಯಿತು.

ಸಭೆಯಲ್ಲಿ ಕಾರ್ಮಿಕರು ಹಾಗೂ ಅವರ ಕುಟುಂಬಸ್ಥರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿ, ಆರೋಗ್ಯ ಸೇವೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮತ್ತು ಸುಧಾರಿತವಾಗಿ ಒದಗಿಸಲು ಹಲವು ಮಹತ್ವದ ಶಿಫಾರಸ್ಸು ಗಳನ್ನು ಮಂಡಿಸಲಾಯಿತು.

ಆಸ್ಪತ್ರೆಯಲ್ಲಿ ಖಾಯಂ ಫಿಝಿಷಿಯನ್ ಹಾಗೂ ಹೃದ್ರೋಗ ತಜ್ಞರನ್ನು ನೇಮಕ ಮಾಡುವುದು, ತುರ್ತು ಚಿಕಿತ್ಸಾ ಘಟಕ (ಐಸಿಯು) ಸ್ಥಾಪನೆ, ವೆಂಟಿಲೇಟರ್‌ಯುಕ್ತ ಆಂಬುಲೆನ್ಸ್ ಖರೀದಿ, ಉತ್ತಮ ನೈರ್ಮಲ್ಯಯುಕ್ತ ಪರಿಸರ ನಿರ್ಮಾಣ, ಗುಣಮಟ್ಟದ ಔಷಧಿ ಹಾಗೂ ಪೌಷ್ಟಿಕ ಆಹಾರ ಒದಗಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಇದೇ ವೇಳೆ ಕಾರ್ಮಿಕರ ತಂದೆ-ತಾಯಿಗಳಿಗೆ ಪ್ರತ್ಯೇಕ ರೆಫರ್ ಚಿಕಿತ್ಸೆ ಸೌಲಭ್ಯ, ಉಚಿತ ಅಂಬುಲೆನ್ಸ್ ವ್ಯವಸ್ಥೆ, ಆಸ್ಪತ್ರೆಯಲ್ಲಿ ಉನ್ನತ ದರ್ಜೆಯ ಸ್ಕ್ಯಾನಿಂಗ್ ಸೌಲಭ್ಯ, ವಾರ್ಡ್‌ಗಳಲ್ಲಿ ಬಿಸಿ ನೀರಿನ ವ್ಯವಸ್ಥೆ, ರೋಗಿಗಳು ಮತ್ತು ಸಹಾಯಕರಿಗೆ ಊಟದ ಕೋಣೆ ನಿರ್ಮಾಣ, ಡೇ-ಕೇರ್ ರೋಗಿಗಳಿಗೆ ನೆರಳು ಮತ್ತು ಆಸನ ವ್ಯವಸ್ಥೆ ಮಾಡಿಕೊಡುವಂತೆ ಆಗ್ರಹಿಸಲಾಯಿತು.

ಇದಲ್ಲದೆ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸ್ಟಾಫ್ ನರ್ಸ್‌ಗಳು ಮತ್ತು ಗುತ್ತಿಗೆ ಆಧಾರದ ನೌಕರರಿಗೆ ರಿಸ್ಕ್ ಅಲೋವನ್ಸ್ ನೀಡುವುದು, ತುರ್ತು ಚಿಕಿತ್ಸಾ ಘಟಕದಲ್ಲಿ ಡ್ರೈವರ್‌ಗಳಿಗೆ ವಿಶ್ರಾಂತಿ ಕೊಠಡಿ ನಿರ್ಮಿಸುವುದು, ಆರ್.ಓ. ವಾಟರ್ ಫಿಲ್ಟರ್ ಅಳವಡಿಸುವುದು ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಮನವಿ ಸಲ್ಲಿಸಲಾಯಿತು.

ಸಭೆಯಲ್ಲಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ವಸಂತ್ ಕುಮಾರ್, ಹಣಕಾಸು ವಿಭಾಗದ ಕಾರ್ಯದರ್ಶಿ ಬಾಬುರಾವ್, ಡಾ. ಸಂತೋಷ ಎನ್., ಡಾ. ಪ್ರಶಾಂತ ನಾವಡಗಿ, ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ಕಾರ್ಯದರ್ಶಿ ವೆಂಕೋಬ್ ಮಿಯ್ಯಾಪೂರು, ಸಮಿತಿಯ ಸದಸ್ಯರಾದ ದುರುಗಪ್ಪ, ಫಕ್ರುದ್ದೀನ್, ಸೋಮಣ್ಣ ನಾಯಕ್, ಆಸ್ಪತ್ರೆಯ ಸಿಬ್ಬಂದಿ ಕೃಷ್ಣಾ, ರೇಷ್ಮಾ ಹಾಗೂ ಮಹಮ್ಮದ್ ಉಪಸ್ಥಿತರಿದ್ದರು.

ಕೊಪ್ಪಳ ವಿಶ್ವವಿದ್ಯಾಲಯದ ಸಂಸ್ಥಾಪನಾ ಕುಲಪತಿ ಪ್ರೊ. ಬಿ.ಕೆ. ರವಿ ಅವರಿಗೆ ಅಭಿನಂದನಾ ಸಮಾರಂಭ

ಕೊಪ್ಪಳ ವಿ.ವಿಗೆ ಭದ್ರ ಬುನಾದಿ ಹಾಕಿದ್ದು ಪ್ರೊ.ಬಿ.ಕೆ ರವಿ: ಅಲ್ಲಮಪ್ರಭು



ಕೊಪ್ಪಳ,ಮೇ.14-

ಕೊಪ್ಪಳ ವಿಶ್ವವಿದ್ಯಾಲಯಕ್ಕೆ ಭದ್ರ ಬುನಾದಿಯನ್ನು ಹಾಕಿದ್ದು ಬಿ.ಕೆ.ರವಿಯವರು. ವಿಶ್ವವಿದ್ಯಾಲಯ ಸ್ಥಾಪಿಸುವಲ್ಲಿ ಅವರ ಪರಿಶ್ರಮ ಹಿರಿದು ಎಂದು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಮತ್ತು ಹಿರಿಯ ಹೋರಾಟಗರಾರದ ಪ್ರೊ. ಅಲ್ಲಮಪ್ರಭು ಬೆಟ್ಟದೂರ ಅವರು ಹೇಳಿದರು.

ಅವರು ಬುಧವಾರದಂದು ತಳಕಲ್‌ನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಆವರಣದಲ್ಲಿರುವ ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ನಡೆದ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದ ವತಿಯಿಂದ ವಿಶ್ವವಿದ್ಯಾಲಯದ ಸಂಸ್ಥಾಪನಾ ಕುಲಪತಿಗಳಾದ ಪ್ರೊ. ಬಿ.ಕೆ. ರವಿ ಅವರ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿ ದರು.

ಬಿ.ಕೆ. ರವಿ ಅವರು ಕೊಪ್ಪಳ ವಿಶ್ವವಿದ್ಯಾಲಯದ ಕಡೆ ಜನರನ್ನು ಕೊಂಡೊಯ್ದರು. ನಮ್ಮ ಜಿಲ್ಲೆಯ ಮಕ್ಕಳು ಪದವಿ, ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸಕ್ಕೆ ಬೇರೆ ಊರುಗಳಿಗೆ, ಜಿಲ್ಲೆಗಳಿಗೆ ಹೋಗುವ ಪರಿಸ್ಥಿತಿ ಇತ್ತು. ಆದರೆ ನಮ್ಮ ಜಿಲ್ಲೆಯ ಹೆಮ್ಮೆ ನಮ್ಮ ಕೊಪ್ಪಳ ವಿಶ್ವವಿದ್ಯಾಲಯ ಸ್ಥಾಪನೆ ನಂತರ ನಮ್ಮ ಜಿಲ್ಲೆಯ ಮಕ್ಕಳಿಗೆ ಹೆಚ್ಚಿನ ಅನುಕೂಲವಾಗಿದೆ. ಕೊಪ್ಪಳ ವಿವಿಯ ಸ್ನಾತಕೋತ್ತರ ಕೇಂದ್ರಗಳನ್ನೂ ತಾಲ್ಲೂಕುಗಳಲ್ಲಿ ಸ್ಥಾಪಿಸಲಾಗಿದ್ದು, ಸ್ಥಳೀಯವಾಗಿ ಶೈಕ್ಷಣಿಕ ಸೌಲಭ್ಯ ದೊರೆಯುವಂತಾಗಿದೆ. ಇದರ ಪ್ರಮುಖ ರೂವಾರಿ ಪ್ರೊ.ಬಿ.ಕೆ ರವಿಯವರು ಎಂದು ಅವರು ಹೇಳಿದರು. ಸನ್ಮಾನಿತರಾಗಿ ಮಾತನಾಡಿದ ಸಂಸ್ಥಾಪನಾ ಕುಲಪತಿ ಪ್ರೊ ಬಿ.ಕೆ ರವಿ ಅವರು, ಯಾವುದೇ ಒಂದು ವಿಶ್ವವಿದ್ಯಾಲಯ ಸಂಸ್ಥಾಪನೆ ಮಾಡಿ ಮುನ್ನಡೆಸುವುದು ಸುಲಭದ ಮಾತಲ್ಲ. ಅದರ ಹಿಂದೆ ಕಾಣದ ಕೈಗಳ ಪರಿಶ್ರಮ ಕೂಡ ಇರುತ್ತದೆ. ಕೊಪ್ಪಳ ಜನತೆ ಮತ್ತು ಜನಪ್ರತಿನಿಧಿಗಳು ವಿಶ್ವವಿದ್ಯಾಲಯ ಸಂಸ್ಥಾಪಿಸುವಲ್ಲಿ ಹಲವು ರೀತಿಯಲ್ಲಿ ಕಾರಣೀಭೂತರಾಗಿದ್ದಾರೆ. ಇಲ್ಲಿನ ವಿದ್ಯಾರ್ಥಿ ಗಳನ್ನು ವಿದ್ಯಾವಂತರನ್ನಾಗಿ ಮಾಡುವುದು, ಶೈಕ್ಷಣಿಕವಾಗಿ ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದು ವಿವಿಯ ಆದ್ಯತೆ. ಕೊಪ್ಪಳ ವಿವಿ ಕುಲಪತಿ ಆಗಿದ್ದ ಸಂದರ್ಭದಲ್ಲಿ ಸಾಹಿತಿಗಳು, ಹೋರಾಟಗಾರರು, ಪತ್ರಕರ್ತರು, ಬಹುತೇಕ ಜನ ನನಗೆ ಸಹಕರಿಸಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೊಪ್ಪಳ ವಿವಿಯ ಪ್ರಭಾರಿ ಕುಲಪತಿಗಳಾದ ಪ್ರೊ.ಎಸ್.ಬಿ. ಡಾಣಿ ಅವರು ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ, ಪಠ್ಯೇತರ ಚಟುವಟಿಕೆ, ಸಮಾಜಮುಖಿ ಕೆಲಸಗಳಲ್ಲಿಯೂ ತೊಡಗಿಕೊಳ್ಳಬೇಕು. ಶಿಕ್ಷಣವು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದ್ದು ವಿದ್ಯಾರ್ಥಿ ಗಳು ಸಮಾಜಕ್ಕೆ ಉತ್ತಮ ಪ್ರಜೆಯಾಗ ಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಪ್ರೊ. ಓಂಕಾರ ಕಾಕಡೆ ಅವರು ಅಭಿನಂದನಾ ನುಡಿಗಳನ್ನಾಡಿದರು. ಕೊಪ್ಪಳ ವಿ.ವಿ.ಯ ಕುಲಸಚಿವರಾದ (ಮೌಲ್ಯ ಮಾಪನ) ಪ್ರೊ. ರಮೇಶ ಕೆ. ಮತ್ತು ಹಣಕಾಸು ಅಧಿಕಾರಿಗಳಾದ ಅಮೀನ ಸಾಬ, ಡಾ.ಪ್ರವೀಣ್ ಪೊಲೀಸ್ ಪಾಟೀಲ್, ಕೆ.ಚಂದ್ರು, ಗಂಗಾವತಿ ಪಿ.ಜಿ ಸೆಂಟರ್ ನಿರ್ದೇಶಕರಾದ ಶಿವರಾಜ ಗುರಿಕಾರ್, ಮಾಧ್ಯಮ ಅಕಾಡೆಮಿ ಸದಸ್ಯರಾದ ಕೆ.ನಿಂಗಜ್ಜ, ಚಲನಚಿತ್ರ ಅಕಾಡೆಮಿಯ ಸದಸ್ಯರಾದ ಸಾವಿತ್ರಿ ಮುಜುಂದಾರ್, ಸೇರಿದಂತೆ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

19 ರಂದು ಶಿಶಿಕ್ಷು ತರಬೇತಿಗೆ ಕ್ಯಾಂಪಸ್ ಸಂದರ್ಶನ

ಕೊಪ್ಪಳ,ಮೇ.14-

ಟಣಕನಕಲ್‌ನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಮೇ 19 ರಂದು ಬೆಳಿಗ್ಗೆ 9 ಗಂಟೆಗೆ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈ.ಲಿ. ಬಿಡದಿ-ಬೆಂಗಳೂರು ಅವರ ವತಿಯಿಂದ ಐಟಿಐ ಪಾಸ್ ಆದ ಹಾಗೂ ಪ್ರಸ್ತುತ ಐಟಿಐ ಎರಡನೇ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ಶಿಶಿಕ್ಷು ತರಬೇತಿಗಾಗಿ ಕ್ಯಾಂಪಸ್ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಸಂದರ್ಶನವನ್ನು ಟಣಕನಕಲ್ ಸಂಸ್ಥೆಯಲ್ಲಿ ಮಾತ್ರ ನಡೆಸುತ್ತಿರುವುದ ರಿಂದ ಜಿಲ್ಲೆಯ ಎಲ್ಲ ಸರ್ಕಾರಿ, ಅನು ದಾನಿತ ಹಾಗೂ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ತರಬೇತಾರ್ಥಿ ಗಳು ಈ ಅವಕಾಶದ ಸದುಪಯೋಗ ಪಡಿಸಿಕೊಳ್ಳಲು ತಿಳಿಸಿದೆ. ಆಸಕ್ತರು ಆಸಕ್ತರು ತಮ್ಮ ಆಧಾರ್ ಕಾರ್ಡ, ಫೋಟೋ, ವಿದ್ಯಾರ್ಹತೆಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳ ಜೊತೆಗೆ 2 ಸೆಟ್ ಝೆರಾಕ್ಸ್ ಪ್ರತಿಗ ಳೊಂದಿಗೆ ಸಂದರ್ಶನಕ್ಕೆ ಹಾಜರಾಗ ಬಹುದು. ಹೆಚ್ಚಿನ ಮಾಹಿ ತಿಗಾಗಿ ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಕೊಪ್ಪಳ (ಟಣಕನ ಕಲ್, ಕುಷ್ಟಗಿ ರಸ್ತೆ, ಕೊಪ್ಪಳ). ಮೊಬೈಲ್ ಸಂ:- 9449330436, 9448813422, 9945 5 77155, 9742532353, 9945 672606, 9964780198 ಗೆ ಸಂಪರ್ಕಿಸಬ ಹುದು ಎಂದು ಸಂಸ್ಥೆಯ ಪ್ರಾಚಾ ರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಕಳಪೆ ಬಾಳೆ ಸಸಿಗಳನ್ನು ನೀಡಿರುವ ಕಂಪನಿ ವಿರುದ್ಧ ಕ್ರಮಕ್ಕೆ ಪ್ರಾಂತ ರೈತ ಸಂಘ ಒತ್ತಾಯ



ಹೊಸಪೇಟೆ ಮೇ.14-

ತಾಲೂಕಿನಲ್ಲಿ ಕಳಪೆ ಬಾಳೆ ಸಸಿಗಳನ್ನು ನೀಡಿರುವ ಕಂಪನಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸಿದೆ.

ಈ ಕುರಿತು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಿಗೆ ಮನವಿಪತ್ರ ಸಲ್ಲಿಸಿರುವ ರೈತರು ತಾಲೂಕಿನ ರಾಜಾಪುರ ಗ್ರಾಮದ ರೈತರು ತಮ್ಮ ಜಮೀನುಗಳಲ್ಲಿ ಬಾಳೆ ಸಸಿ ನಾಟಿ ಮಾಡಲು, ಆದಿತ್ಯ ಬಯೋ ಟೆಕ್ ವಿಜಯಪುರ, ದೇವನಹಳ್ಳಿ ಬೆಂಗಳೂರು ಇವರಿಂದ ಸುಮಾರು 6000 ಸಸಿಗ ಳನ್ನು ಒಂದಕ್ಕೆ 22 ರೂಪಾಯಿಗಳಂತೆ ಖರೀದಿಸಿ ನಾಟಿ ಮಾಡಿರುತ್ತಾರೆ. ಆದರೆ ನಾಟಿ ಮಾಡಿದ ಬಾಳೆ ಸಸಿಗಳು ಬೆಳೆದು ನಿಲ್ಲುವ ಮೊದಲೇ ಕಮರಿ ಹೋಗಿರುತ್ತವೆ. ಈ ಹಿನ್ನಲೆಯಲ್ಲಿ ಬಾಳೆ ಸಸಿಗಳನ್ನು ನೀಡಿರುವ ಕಂಪನಿ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ರೋಗಗ್ರಸ್ತ ಸಸಿಗಳನ್ನು ರಾಯ ಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಪರೀಕ್ಷೆ ನಡೆಸಿ ವರದಿ ನೀಡು ವಂತೆ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ರೈತರಿಗೆ ಆದಿತ್ಯ ಬಯೋಟೆಕ್ ಕಂಪನಿಯವರು ಮಾಹಿತಿ ನೀಡುವಾಗ ನಮ್ಮ ಸಸಿಗಳು ಕೃಷಿ ತಜ್ಞರ ಸಲಹೆ ಪಡೆದು ಮಾರ್ಕೆಟ್‌ಗೆ ಬಿಡುಗಡೆಗೊಳಿಸಿರು ತೇವೆ. ಇದರಿಂದ ಉತ್ತಮ ಫಸಲು ಕೈಗೆ ಬರುತ್ತದೆ. ಆರ್ಥಿಕ ಸ್ಥಿತಿ ದ್ವಿಗುಣಗೊಂಡು ಉತ್ತಮ ಲಾಭ

ದೊರೆಯಲಿದೆ ಎಂದು ತಿಳಿಸಿದ್ದು. ಯಾವುದೇ ಸಸಿ ಗಳು ನಶಿಸಿ ಹೋದಲ್ಲಿ ಅದರ ಒಟ್ಟು ಸಸಿಗಳ ಹಣ ವನ್ನು ಹಾಗೂ ಅದರ ನಾಟಿಯ ಆರಂಭದಲ್ಲಿ ತಗು ಲಿದ ಕೃಷಿ ನಷ್ಟವನ್ನು ಭರಿಸುವುದಾಗಿ ಸಹ ಭರವಸೆ ನೀಡಿರುತ್ತಾರೆ.

ಅವರ ಭರವಸೆಗಳನ್ನು ನಂಬಿ ರೈತರು ಸಾವಿರಾರು ರೂಪಾಯಿಗಳು ಸಾಲ ಮಾಡಿ ಸಸಿ. ಖರೀದಿಸಿ ನಾಟಿ ಮಾಡಿದ್ದು. ಈಗ ನಾಟಿ ಮಾಡಿದ ಸಸಿಗಳು ಬೆಳೆಯುವ ಮೊದಲೇ ನಶಿಸಿ ಹೋಗಿರು ವುದರಿಂದ ಕಂಪನಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಹಾಗೂ ಕಂಪನಿಯಿಂದ ನಷ್ಟ ಪರಿಹಾರ ಕೊಡಿಸುವಂತೆ ರೈತರು ಒತ್ತಾಯಿ ಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಸಂಚಾಲಕ ಆನಂದ್, ಮುಖಂಡರಾದ ಎನ್.ಯಲ್ಲಾಲಿಂಗ, ಚಂದ್ರು, ಕರೆ ಹನುಮಂತ ಕರಿಯಣ್ಣ, ನಬೀಸಾಬ, ಕಣಿಮಪ್ಪ, ಎ.ಸ್ವಾಮಿ, ದುರು ಗಪ್ಪ, ಗಣೇಶ ಸೇರಿದಂತೆ ಪಾಲ್ಗೊಂಡಿದ್ದರು.



ವಿಜ್ಞಾನ, ತಾರಾಲಯ ಕೇಂದ್ರಗಳ ಸಂದರ್ಶಕರ ಸಂಖ್ಯೆ ಹೆಚ್ಚಿಸಲು ಕ್ರಮ

ಬಾಗಲಕೋಟೆ ,ಮೇ.14

ಪ್ರಾದೇಶಿಕ ಮತ್ತು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳು ಹಾಗೂ ತಾರಾಲಯಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಭೇಟಿ ನೀಡುವಂತೆ ಮಾಡಲು ವಿವಿಧ ಕಾರ್ಯಕ್ರಮಗಳನ್ನು ರೂಪಿಸು ವಂತೆ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅಧಿಕಾರಿಗಳಿಗ ಸೂಚನೆ ನೀಡಿದರು.

ಅಪರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿಂದು ಜರುಗಿದ ಪ್ರಾದೇಶಿಕ ಮತ್ತು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳು ಹಾಗೂ ತಾರಾಲಯಗಳಿಗೆ ಸಂದರ್ಶಕ ಸಂಖ್ಯೆ ಹೆಚ್ಚಿಸುವ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸ ಮಾತನಾಡಿದ ಅವರು ವಿಶೇಷವಾಗಿ ಶಾಲಾ-ಕಾಲೇಜು ವಿದ್ಯಾರ್ಥಿಗಳನ್ನು ಆಕರ್ಷಿ ಸಲು ವಿಜ್ಞಾನ ಪ್ರದರ್ಶನಗಳು, ಆಕಾಶ ವೀಕ್ಷಣೆ ಕಾರ್ಯಕ್ರಮಗಳು, ವಿಜ್ಞಾನ ಮಾದರಿ ಪ್ರದರ್ಶನ, ವಿಜ್ಞಾನ ಮೇಳ ಹಾಗೂ ಖಗೋಳಶಾಸ್ತ್ರ ಕುರಿತು ಕಾರ್ಯಕ್ರಮಗಳನ್ನು ಆಯೋಜಿಸಲು ತಿಳಿಸಿದರು.

ಗ್ರಾಮೀಣ ಹಾಗೂ ನಗರ ಪ್ರದೇಶಗಳ ವಿದ್ಯಾರ್ಥಿಗಳಿಗೆ ವಿಜ್ಞಾನ ಕೇಂದ್ರಗಳ ಮಹತ್ವ ತಿಳಿಸುವ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ತಾರಾಲಯ ಗಳಲ್ಲಿ ಹೊಸ ತಂತ್ರಜ್ಞಾನ ಆಧಾರಿತ ಪ್ರದರ್ಶನ, ಡಿಜಿಟಲ್ ಆಕಾಶ ವೀಕ್ಷಣೆ, ಮಕ್ಕಳಿಗೆ ಅನುಕೂಲಕರ ವಿಜ್ಞಾನ ಚಟುವಟಿಕೆಗಳನ್ನು ಪರಿಚ ಯಿಸುವ ಮೂಲಕ ಸಂದರ್ಶಕರನ್ನು ಸೆಳೆಯುವ ಪ್ರಯತ್ನ ಮಾಡಬೇಕು. ವಿಜ್ಞಾನ ಸ್ಪರ್ಧೆಗಳು, ಕುಟುಂಬ ಸಮೇತ ಭೇಟಿ ನೀಡಲು ಅನುಕೂಲಕರ ಚಟುವಟಿಕೆಗಳು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ಕಾರ್ಯವನ್ನು ಕೈಗೊಳ್ಳಲು ತಿಳಿಸಿದರು.

ಶಿಕ್ಷಣ ಇಲಾಖೆಯ ಅಧಿಕಾರಿಗಳು ಐಟಿಐ, ಪಾಲಿಟೆಕ್ನಿಕ್, ಪದವಿ ಪೂರ್ವ, ಪದವಿ ಕಾಲೇಜುಗಳು, ತಾಂತ್ರಿಕ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳ ಸಮನ್ವಯ ಸಭೆ ಕರೆದು ಎಲ್ಲ ವಿದ್ಯಾರ್ಥಿಗಳು ವರ್ಷಕ್ಕೆ ಕನಿಷ್ಟ ಒಂದು ಬಾರಿಯಾದರೂ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಿದರು.

ಸಭೆಯಲ್ಲಿ ತೋಟಗಾರಿಕೆ ವಿವಿಯ ರಜಿಸ್ಟರ ಡಾ.ಜನಾರ್ಧನ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎ.ಸಿ.ಮನ್ನಿಕೇರಿ, ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯ ಪರಶುರಾಮ ಲಮಾಣಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸದಾಶಿವ ಬಡಿಗೇರ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಂಕಜ, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾ ಧಿಕಾರಿ ಶಿವಾನಂದ ಪಟ್ಟಣಶೆಟ್ಟಿ ಸೇರಿದಂತೆ ಇತರರು ಉಪಸ್ಥಿತರಿ ದ್ದರು.

ಒಡೆದ ಮನಸ್ಸುಗಳನ್ನು ಬೆಸೆಯುವುದೇ ಧರ್ಮದ ಗುರಿ : ರಂಭಾಪುರಿ ಶ್ರೀ



ನವಲಗುಂದ ಮೇ-14

ಸಮಾಜದ ಎಲ್ಲ ರಂಗಗಳಲ್ಲಿ ಹೆಚ್ಚುತ್ತಿರುವ ಸಂಘರ್ಷ ನಿಂತು ಶಾಂತಿ ಸಾಮರಸ್ಯ ಮೂಡಿಸುವ ಕೆಲಸ ಮಠಗಳಿಂದ ನಡೆಯಬೇಕು. ಒಡೆದ ಮನಸ್ಸು ಗಳನ್ನು ಬೆಸೆಯುವುದೇ ನಿಜವಾದ ಧರ್ಮದ ಗುರಿಯಾಗಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಬುಧವಾರ ಸ್ಥಳೀಯ ಪಂಚಗೃಹ ಹಿರೇಮಠದ ಶ್ರೀ ಗುರು ಪಟ್ಟಾಧಿಕಾರ ಮಹೋತ್ಸವ ಧರ್ಮ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಧರ್ಮ ಸಂಸ್ಕೃತಿಯ ಮತ್ತು ತತ್ವ ಸಿದ್ಧಾಂತ ಪರಂಪರೆಗಳ ತಾಯ್ನಾಡು ಭಾರತ. ವಿಪತ್ತಿನ ಕಾಲದಲ್ಲೂ ಸಹ ಧರ್ಮವನ್ನು ಬಿಡಲಾರದಿರುವವನು ನಿಜವಾದ ಧರ್ಮಾತ್ಮ. ನದಿ ಸಮುದ್ರಗಳನ್ನು ಸೇತುವೆ ಮೂಲಕ ಗುಡ್ಡ ಬೆಟ್ಟಗಳನ್ನು ಸುರಂಗ ಮಾರ್ಗ ನಿರ್ಮಿಸಿ ದಾಟಬಹುದು. ಆದರೆ ಮನದ ಮಧ್ಯೆ ನಿರ್ಮಾಣಗೊಂಡ ಸ್ವಾರ್ಥದ ಗೋಡೆಗಳನ್ನು ದಾಟುವುದು ತುಂಬಾ ಕಷ್ಟ. ಗಾಡಾಂಧಕಾರದಲ್ಲಿ ಮುಳುಗಿದ ಮಾನವರನ್ನು ಎಚ್ಚರಿಸಿ ಜಾಗೃತಿ ಉಂಟು ಮಾಡುವುದೇ ಧಾರ್ಮಿಕ ಕೇಂದ್ರಗಳ ಮುಖ್ಯ ಗುರಿಯಾಗಿದೆ. ವೀರಶೈವ ಧರ್ಮ ಸಕಲರಿಗೂ ಒಳಿತನ್ನೇ ಬಯಸುತ್ತಾ ಬಂದಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಚಾರ ಧಾರೆಗಳು ಸರ್ವ ಕಾಲಕ್ಕೂ ಸರ್ವರಿಗೂ ಅನ್ವಯಿಸುತ್ತವೆ. ನವಲಗುಂದ ಪಂಚಗೃಹ ಹಿರೇಮಠಕ್ಕೆ ಇಂದು ಶ್ರೀ ಇಮ್ಮಡಿ ಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು ನೂತನ ಶ್ರೀಗಳಾಗಿ ಗುರುತ್ವಾಧಿಕಾರ ಸ್ವೀಕರಿಸಿದ್ದಾರೆ. ನೂತನ ಶ್ರೀಗಳು ಧರ್ಮ ಮತ್ತು ಸಮಾಜ ಮುಖಿಯಾಗಿ ಕಾರ್ಯ ನಿರ್ವಹಿಸಲೆಂದು ರೇಷ್ಮೆ ಮಡಿ ಸ್ಮರಣಿಕೆ ಫಲ ಪುಷ್ಪವಿತ್ತು ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಹಿರಿಯ ಶ್ರೀ ಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳ ತಾಳ್ಮೆ ಮತ್ತು ಧರ್ಮ ಶ್ರದ್ಧಾ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ರೇಷ್ಮೆ ಮಡಿ ಫಲ ಪುಷ್ಪವಿತ್ತು ಆಶೀರ್ವದಿಸಿದರು. ಸಾನ್ನಿಧ್ಯ ವಹಿಸಿ ದ ಶ್ರೀ ಉಜ್ಜಯಿನಿ ಸಿದ್ದಲಿಂಗ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಮಾನವೀಯ ಸಂಬಂಧಗಳನ್ನು ಸದೃಢಗೊಳಿಸಲು ಆಯಾ ಕಾಲ ಘಟ್ಟಗಳಲ್ಲಿ ಆಚಾರ್ಯರು ಋಷಿಮುನಿಗಳು ಸಂತ ಮಹಂತರು ಅವತರಿಸಿ ಬಾಳಿಗ ಬೆಳಕು ತೋರಿಸಿದ್ದಾರೆ. ಸತ್ಯ ಶಾಂತಿ, ಸಾಮರಸ್ಯ ಸೌಹಾರ್ದತೆ, ಧರ್ಮನಿಷ್ಠೆ ದೇಶ ಭಕ್ತಿ ಬೆಳೆಸುವ ನಿಟ್ಟಿನಲ್ಲಿ ಮಠಗಳು ಕಾರ್ಯ ಮಾಡುತ್ತಾ ಬಂದಿವೆ. ಪಂಚಗೃಹ ಹಿರೇಮಠದ ನೂತನ ಶ್ರೀಗಳವರು ಸಮಾಜಕ್ಕೆ ಅಮೂಲ್ಯ ಮಾರ್ಗದರ್ಶನ ನೀಡುವ ಶಕ್ತಿಯನ್ನು ಭಗವಂತ ಅನುಗ್ರಹಿಸಲೆಂದರು. ಸಾನ್ನಿಧ್ಯ ವಹಿಸಿದ ಶ್ರೀ ಶ್ರೀಶೈಲ ಡಾ||ಚನ್ನಸಿದ್ಧರಾಮ ಪಂಡಿತಾರಾಧ್ಯ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಮರೆಯುವುದು ಮನುಷ್ಯನ ಗುಣ. ಮರೆತು ಹೋದುದನ್ನು ನೆನಪು ಮಾಡಿಕೊಡುವುದೇ ಮಠಗಳ ಕೆಲಸ. ಹೃದಯ ಹೃದ್ಭೂಮಿ ಕೃಷಿಗೈದು ಶಿವಜ್ಞಾನದ ಅರಿವನ್ನು ಉಂಟು ಮಾಡುವುದೇ ಗುರು ಧರ್ಮವಾಗಿದೆ. ಮಠಗಳು ಸಂಸ್ಕಾರ ಸಚ್ಚಾರಿತ್ರ್ಯ ಬೋಧಿಸುವ ಕೇಂದ್ರಗಳಾಗಬೇಕು. ನೂತನ ಶ್ರೀಗಳವರು ಆತ್ಮ ಸಂಯಮದಿಂದ ಬಾಳಿ ಭಕ್ತರಿಗೆ ಕಣ್ಮಣಿಯಾಗಲೆಂದು ಶುಭ ಹಾರೈಸಿದರು.

ಸಾನ್ನಿಧ್ಯ ವಹಿಸಿದ ಶ್ರೀ ಕಾಶೀ ಡಾ|| ಚಂದ್ರಶೇಖರ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಯೋಗಿ, ಭೋಗಿ ಮತ್ತು ರೋಗಿ ಯಾವಾಗಲೂ ಎಚ್ಚರವಾಗಿರುತ್ತಾರೆ. ಯೋಗಿ ಸಾಧನೆಗಾಗಿ ಭೋಗಿ ಇಂದ್ರಿಯ ಸುಖಕ್ಕಾಗಿ ರೋಗಿ ವೇದನೆಯಿಂದ ಎಚ್ಚರವಾಗಿರುತ್ತಾರೆ. ಅರಿವಿನ ಕಣ್ಣು ತೆರೆಸಲು ಅಜ್ಞಾನ ದೂರ ಮಾಡಲು ಶ್ರೀ ಗುರು ಅವಶ್ಯಕ. ವೀರಶೈವ ಧರ್ಮ ಇದೊಂದು ಅಶ್ವತ್ಥ ವೃಕ್ಷ ಇದ್ದಂತೆ. ನವಲಗುಂದ ಪಂಚಗೃಹ ಹಿರೇಮಠ ಕಾಶೀ ಪೀಠದ ಶಾಖಾ ಮಠವಾಗಿದೆ. ಹಿಂದಿನ ಸಿದೇಶ್ವರ ಶಿವಾಚಾರ್ಯರ ಚಿಂತನ ಇಂದಿನ ನೂತನ ಶ್ರೀಗಳ ಕ್ರಿಯಾಶೀಲ ಬದುಕು ಶ್ರೀ ಮಠದ ಶ್ರೇಯೋಭಿವೃದ್ಧಿಗೆ ಮತ್ತು ಭಕ್ತ ಸಂಕುಲದ ಒಳಿತಿಗಾಗಿ ಶ್ರಮಿಸಲೆಂದು ನೂತನ ಶ್ರೀಗಳವರಿಗೆ ದಂಡ ಕಮಂಡಲ ಪಂಚ ಮುದ್ರಾ ಸಮೇತ ಶುಭ ಹಾರೈಸಿದರು. ಸಾನ್ನಿಧ್ಯ ವಹಿಸಿದ ಶ್ರೀ ಕಾಶೀ ನೂತನ ಡಾ.ವಿಶ್ವಾರಾಧ್ಯ ಮಲ್ಲಿಕಾರ್ಜುನ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ ಮನುಷ್ಯ ಜೀವನದಲ್ಲಿ ಚತುರ್ವಿಧ ಪುರುಷಾರ್ಥಗಳ ಸಂಪಾದನೆಯಲ್ಲಿ ಒಂದನ್ನಾದರೂ ಗಳಿಸಿಕೊಳ್ಳದಿದ್ದರೆ ಮಾನವ ಜೀವನ ವ್ಯರ್ಥವಾಗುತ್ತದೆ. ಈಶ ನಿರ್ಮಿತವಾದ ಈ ಪ್ರಪಂ ಚದಲ್ಲಿ ಇರುವುದೆಲ್ಲವೂ ಅಮೂಲ್ಯ ಸಂಪತ್ತು. ಚಿನ್ನವಿಲ್ಲದೇ ಬದುಕಬಹುದು. ಆದರೆ ಅನ್ನವಿಲ್ಲದೇ ಬದುಕಲಾಗದು. ಮನುಷ್ಯನ ಮನಸ್ಸೆಂಬ ಆವೇಶದ ಚಂಚಲದ ಹೊಯ್ದಾಟವನ್ನು ಶಾಂತ ಪ್ರಶಾಂತಗೊಳಿಸಿ ಸನ್ಮಾರ್ಗಕ್ಕೆ ಕರೆದೊಯ್ಯುವುದೇ ಗುರುವಿನ ಧರ್ಮವಾಗಿದೆ. ನೂತನ ಶ್ರೀಗಳಿಂದ ಮಠದ ಅಭಿವೃದ್ಧಿ ಭಕ್ತರಿಗೆ ಮಾರ್ಗದರ್ಶನ ನೀಡುವ ಶಕ್ತಿಯನ್ನು ಆಚಾರ್ಯರು ಅನುಗ್ರಹಿಸಲೆಂದು ಶುಭ ಹಾರೈಸಿದರು. ನೂತನ ಶ್ರೀಗಳವರಿಗೆ ಹಿರಿಯ ಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು ಷಟ್‌ಸ್ಥಲ ಬ್ರಹ್ಮೋಪದೇಶ ನೀಡಿ ಗುರುತ್ವ ಅಧಿಕಾರ ಅನುಗ್ರಹಿಸಿದರು.

ನೂತನ ಶ್ರೀಗಳ ಸಂದೇಶ: ನವಲಗುಂದ ಪಂಚಗೃಹ ಹಿರೇಮಠದ ನೂತನ ಇಮ್ಮಡಿ ಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಪೂರ್ವ ಜನ್ಮದ ಸುಕೃತ ಮತ್ತು ಸಿದ್ದೇಶ್ವರ ಶಿವಾಚಾರ್ಯರ ಆಶೀರ್ವಾದದಿಂದ ಶ್ರೀ ಮಠದ ಪಟ್ಟಾಧ್ಯಕ್ಷನಾಗಿರುವೆ. ವೀರಶೈವ ಧರ್ಮ ಪರಂಪರೆಯ ಆದರ್ಶ ಮೌಲ್ಯಗಳ ಸಂರಕ್ಷಣೆ-ಗುರುಸ್ಥಲದ ಮಹತ್ವವನ್ನು ಅರಿತು ಭಕ್ತ ಸಂಕುಲಕ್ಕೆ ಮಾರ್ಗದರ್ಶನ ಮಾಡುವೆ. ಹೊರಗಿನ ಸಿರಿ ಸಂಪತ್ತಿಗಿಂತ ಆಧ್ಯಾತ್ಮ ಸಂಪತ್ತು ದೊಡ್ಡದು. ಶ್ರೀ ಜಗದ್ಗುರು ಪಂಚ ಪೀಠಾಧೀಶ್ವರರ ಕೃಪಾಶೀರ್ವಾದದಿಂದ ಶ್ರೀ ಮಠದ ಅಭಿವೃದ್ಧಿ, ಭಕ್ತರಿಗೆ ಸಂಸ್ಕಾರ ಮತ್ತು ಗುಣಾತ್ಮಕ ರಚನಾತ್ಮಕ ಕಾರ್ಯಗಳನ್ನು ಮಾಡುತ್ತೇನೆಂದು ಸಂಕಲ್ಪ ಕೈಕೊಂಡರು.

ಪಂಚಗೃಹ ಹಿರೇಮಠದ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಅಧ್ಯಕ್ಷತೆ ವಹಿಸಿ ಮಾತನಾಡಿ ಪರಮಾಚಾರ್ಯರ ಆಶೀರ್ವಾದ ಮತ್ತು ಭಕ್ತರ ಸಹಕಾರ ದೊಡ್ಡದು.

ಬಳ್ಳಾರಿ: ಮಕ್ಕಳಲ್ಲಿನ ಸೃಜನಾತ್ಮಕ ಪ್ರತಿಭೆ ಅನಾವರಣಗೊಳಿಸಿದ ಬೇಸಿಗೆ ಶಿಬಿರ

ಪ್ರತಿಭೆಗಳನ್ನು ಮರೆಯದೆ ಬೆಳೆಸಿಕೊಳ್ಳಿ: ಸವಿತಾ.ಸಿ



ಬಳ್ಳಾರಿ,ಮೇ 14

ಮಕ್ಕಳು ತಾವು ಕಲಿತ ಕಲೆಗಳನ್ನು ಮರೆಯದೆ, ವೈಯಕ್ತಿಕವಾಗಿ ನಿರಂತರವಾಗಿ ಅಭ್ಯಾಸ ಮಾಡುವ ಮೂಲಕ ತಮ್ಮ ಕೌಶಲಗಳನ್ನು ವೃದ್ಧಿಸಿಕೊಳ್ಳಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿ ಕಾರಿ ಯಾದ ಸವಿತಾ.ಸಿ ಅವರು ಹೇಳಿದರು.

ಮಂಗಳವಾರದಂದು ಜಿಲ್ಲಾಡ'ಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಜ್ಯ ಬಾಲಭವನ ಸೊಸೈಟಿ ಬೆಂಗಳೂರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಪಾರ್ವತಿ

ನಗರದ 2ನೇ ಕ್ರಾಸ್‌ನಲ್ಲಿರುವ ಸರ್ಕಾರಿ ಕನ್ನಡ ಮಾಧ್ಯಮ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 05 ರಿಂದ 16 ವರ್ಷದ ಮಕ್ಕಳಿಗಾಗಿ ಆಯೋ ಜಿಸಲಾಗಿದ್ದ 15 ದಿನಗಳ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆ ಗಳಾದ ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ಸಮೂಹ ನೃತ್ಯ, ಸಮೂಹ ಸಂಗೀತ, ಕಸದಿಂದ ರಸ, ಕರಾಟೆ, ಯೋಗ ಇತ್ಯಾದಿಗಳ 'ಬೇಸಿಗೆ ಶಿಬಿರ'ದ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಕ್ಕಳು ಶಿಬಿರದಲ್ಲಿ ಕಳೆದ 15 ದಿನಗಳ ಕಾಲ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಪಡೆದ ತರಬೇತಿಯನ್ನು ಕೇವಲ ಶಿಬಿರಕ್ಕೆ ಸೀಮಿತಗೊಳಿಸಬಾರದು. ಬದಲಾಗಿ ನಿರಂತರ ಅಭ್ಯಸಿ ಸುತ್ತಿರಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ತ್ರಿವೇಣಿ ಪತ್ತಾರ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂತಹ ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಹಾಕಲು ಉತ್ತಮ ವೇದಿಕೆಯಾಗಿವೆ. ಇಲ್ಲಿ ಕಲಿತ ವಿಷಯಗಳು ಮುಂದಿನ ದಿನಗಳಲ್ಲಿ ಶಾಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲು ಮಕ್ಕಳಿಗೆ ಆತ್ಮವಿಶ್ವಾಸ ನೀಡುತ್ತವೆ ಎಂದು ತಿಳಿಸಿದರು. ಶಿಬಿರದ ಅವಧಿಯಲ್ಲಿ ಮಕ್ಕಳು ಕಲಿತ ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ಸಮೂಹ ನೃತ್ಯ, ಸಂಗೀತ, ಯೋಗ ಹಾಗೂ ಕರಾಟೆ ಪ್ರದರ್ಶನಗಳು ಎಲ್ಲರ ಗಮನ ಸೆಳೆದವು. ಶಿಬಿರದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಮಕ್ಕಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು.

ಬೇಸಿಗೆ ತರಬೇತಿ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಕ್ಕಳಿಗೆ ಮಾರ್ಗದರ್ಶನ ನೀಡಿದ ಮಲ್ಲಿಕಾರ್ಜುನ (ಚಿತ್ರಕಲೆ/ಕರಕುಶಲೆ), ಕವಿತಾ (ಸಂಗೀತ), ನಾಗರಾಜ ಕೆ.(ಚದುರಂಗ), ಪ್ರಕಾಶ್ (ಯೋಗ) ಹಾಗೂ ಮನೋಜ್ (ಕರಾಟೆ) ಅವರಿಗೆ ಅಭಿನಂದನೆ ಸಲ್ಲಿಸಲಾಯಿತು.



ಕಮಲನಗರದಲ್ಲಿ ಎರಡು ನಕಲಿ ಕ್ಲಿನಿಕ್ ಸೀಜ್

ಬೀದರ, ಮೇ.14 ಕಮಲನಗರದಲ್ಲಿ ಗೌತಮ ಸಮದರ ಇವರು ಗಣೇಶ ಮೇಡಿಕಲ್‌ನಲ್ಲಿ ಕ್ಲಿನಿಕ್ ನಡೆಸುತ್ತಿರುತ್ತಾರೆ ಹಾಗೂ ಸಾಯಿಲಕ್ಷ್ಮಿ ಆಯುರ್ವೇದ ಆಸ್ಪತ್ರೆ ಇಲ್ಲಿ ಸುಜಲ್ ಕುಮಾರ ಸೇನ್ ಈ ಇಬ್ಬರೂ ಯಾವುದೇ ಅರ್ಹ ವೈದ್ಯಕೀಯ ಪದವಿ ಪಡೆಯದೆ ವೈದ್ಯ ವೃತ್ತಿ ನಡೆಸುತ್ತಿರುವುದು ತಿಳಿದು ಬಂದಿರುವುದರಿಂದ ಇಂದು (ಮೇ.13) ಸದರಿಯವರು ನಡೆಸುತ್ತಿರುವ ಕ್ಲಿನಿಕ್‌ಗಳ ಮೇಲೆ ಕಮಲನಗರ ತಹಸಿಲ್ದಾರ್ ಅಮಿತ್ ಕುಲಕರ್ಣಿ, ಜಿಲ್ಲಾ ಕೆ.ಪಿ.ಎಂ.ಇ ನೋಡಲ್ ಅಧಿಕಾರಿಗಳು ಡಾ. ದಿಲೀಪ ಡೋಂಗ್ರೆ, ತಾಲೂಕಾ ಆರೋಗ್ಯ ಅಧಿಕಾರಿಗಳು ಔರಾದ(ಬಿ) ಡಾ. ಅನೀಲ ಕುಮಾರ, ಕೆ.ಪಿ.ಎಂ.ಇ ವಿಷಯ ನಿರ್ವಾಹಕರು ಮಹೇಶ್ವರ ರೆಡ್ಡಿ ಹಾಗೂ ಪೋಲಿಸ್ ಸಿಬ್ಬಂದಿಯವರನ್ನೊಳಗೊಂಡ ತಂಡದೊ ಂದಿಗೆ ಆಕಸ್ಮಿಕ ದಾಳಿ ನಡೆಸಿ ಕ್ಲಿನಿಕ್‌ಗಳನ್ನು ಸೀಜ್ ಮಾಡಲಾಗಿದೆ. ಈ ಹಿಂದೆ 2023ರಲ್ಲಿ ಗೌತಮ ಸಮದರ ಹಾಗೂ ಸುಜಲ್ ಕುಮಾರ ಸೇನ್ ಇವರ ಕ್ಲಿನಿಕ್‌ಗಳನ್ನು ಸೀಜ್ ಮಾಡಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಕೆಪಿಎಂಇ ನೋಂದಣಿ ಮತ್ತು ಕುಂದುಕೊರತೆ ಪ್ರಾಧಿಕಾರದಲ್ಲಿ ಮಂಡಿಸಿದಾಗ ಜಿಲ್ಲಾಧಿಕಾರಿಗಳು ತಲಾ 25000 ದಂಡ ವಿಧಿಸಿ ಆದೇಶಿಸಿರುತ್ತಾರೆ. ಮುಂದಿನ ಕ್ರಮಕ್ಕಾಗಿ ಜಿಲ್ಲಾಧಿ ಕಾರಿಯವರಲ್ಲಿ ಸಲ್ಲಿಸಲಾಗುವು ದೆಂದು ಬೀದರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇಯ ಪುಟದಿಂದ

ವಕ್ಫ್ ಆಸ್ತಿ ಕಬಳಿಕೆ, ಅಕ್ರಮ ವಾಣಿಜ್ಯ ಮಳಿಗೆ ನಿರ್ಮಾಣ ಆರೋಪ : ತನಿಖೆಗೆ ಆಗ್ರಹ

ಬಾಡಿಗೆಗೆ ನೀಡಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪುರಸಭೆ ಹಾಗೂ ನಗರಾಭಿವೃದ್ಧಿ ಇಲಾಖೆಯ ಪರವಾನಿಗೆ ಪಡೆಯದೇ ಎಡೆಡ್ ಶಾಲೆ ನಿರ್ಮಿಸಿ ವರ್ಷಕ್ಕೆ ಲಕ್ಷಾಂತರ ರೂಪಾಯಿ ಬಾಡಿಗೆ ಪಡೆಯಲಾಗುತ್ತಿದೆ ಎಂದು ಆರೋಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ ವಕ್ಫ್ ಹಾಗೂ ಖಬರಸ್ಥಾನ ಜಾಗದ ಸಂಪೂರ್ಣ ದಾಖಲೆ ಪರಿಶೀಲನೆ ನಡೆಸಬೇಕು, ಅಕ್ರಮ ಕಬಳಿಕೆ ಮತ್ತು ದಾಖಲೆ ಸೃಷ್ಟಿ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು, ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು, ಕಬಳಿಸಲಾದ ವಕ್ಫ್ ಆಸ್ತಿಯನ್ನು ಮರು ವಕ್ಫ್ ಇಲಾಖೆಗೆ ಹಿಂಪಡೆಯಬೇಕು, ಶಾದಿ ಮಹಲ್ ಹಾಗೂ ಇತರೆ ಆಸ್ತಿಗಳ ಸಂಪೂರ್ಣ ಆಡಿಟ್ ನಡೆಸಬೇಕು ಹಾಗೂ ಪ್ರಸ್ತುತ ಈದ್ಗಾ ಕಮಿಟಿಯನ್ನು ರದ್ದುಪಡಿಸಿ ಹೊಸ ಆಡಳಿತ ಮಂಡಳಿಯನ್ನು ಪಾರದರ್ಶಕವಾಗಿ ರಚಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ತನಿಖೆ ನಡೆಸದಿದ್ದಲ್ಲಿ ಮುಂದಿನ ದಿನಗಳಲ್ಲಿ ದಲಿತ ಸೇನೆ ವತಿಯಿಂದ ಉಗ್ರ ಹೋರಾಟ ನಡೆಸಿ ವಕ್ಫ್ ಇಲಾಖೆಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ರಾಜಕುಮಾರ ದೊಡ್ಡಮನಿ ಅಲಿಯಾಳ ಜೈಲಿನ ಅಧೀಕ್ಷಕರಾಗಿ ಮುಂಬಡ್ತಿ

ಕರ್ತವ್ಯದಲ್ಲಿ ಕೋಪ, ತಾಪ ಸಹಜ, ಆದರೂ ತಾಳ್ಮೆ ಮುಖ್ಯ : ಹಿರೇಮನಿ

ಇಷ್ಟವಾಗುತ್ತದೆ ಎಂದು ಹೇಳಿದರು, ನನನ್ನ ಕರ್ತವ್ಯದಲ್ಲಿ ಸ್ವಲ್ಪ ಕೋಪಿಸಿಕೊಂಡಾಗ ಅವರು ನನ್ನನ್ನ ಸುಮ್ನೆ ತಮ್ಮ ಕಣ್ಣು ಸನ್ನೆಯಿಂದಲೇ ನನಗೆ ತಾಳ್ಮೆ ಕಲಿಸಿದ ನಿರ್ಧರ್ಶನಗಳು ಸಾಕಷ್ಟು ಇವೆ, ಕರ್ತವ್ಯದಲ್ಲಿ ಸಮಯಕ್ಕೆ ತಕ್ಕ ಹಾಗೆ ಕೋಪ ತಾಪಗಳು ಸಹಜ ಆದರೆ ಎಲ್ಲಾ ಸಮಯದಲ್ಲೂ ಕೋಪ ಒಳ್ಳೇದಲ್ಲ ತಳ್ಮೆಯೂ ಮುಖ್ಯವಾದುದು ಎಂದು ಪಾಠ ಹೇಳುತ್ತಿದ್ದರು.

ಮನುಷ್ಯನಿಗೆ ಸಂಗೀತ, ಕ್ರೀಡೆ, ಯೋಗ ಮತ್ತು ವ್ಯಾಯಾಮಗಳು ತುಂಬಾ ಅವಶ್ಯಕವಾಗಿವೆ, ನಾನು ತುಂಬಾ ಮುಂಗೋಪದ ಮನುಷ್ಯನಾಗಿದ್ದೆ ಆದರೆ ಸಪ್ತಸ್ವರದವರು ಸ್ವರಲೋಕಕ್ಕೆ ಕರೆದುಕೊಂಡು ಹೋಗಿ ನನ್ನ ಕೋಪವನ್ನು ತಣ್ಣಗಾಗಿಸಿದ್ದಾರೆ ಅವರ ನನಗೆ ಕೊಟ್ಟ ಈ ಕೊಡುಗೆಯನ್ನು ನನ್ನ ಜೀವನದಲ್ಲಿ ಮರೆಯುವುದಿಲ್ಲ, ಅಲಿಯಾಳದಲ್ಲಿ ಸೇಲ್ಲಿಸುವಾಗ ಮತ್ತೆ ನನಗೆ ಮುಂದಿನ ಮುಂಬಡ್ತಿ ಅಥವಾ ವರ್ಗಾವಣೆ ಸಿಕ್ಕರೆ ಮತ್ತೆ ಮರಳಿ ರಾಯಚೂರಿಗೆ ಬರಲು ಪ್ರಯತ್ನಿಸುವೆ, ನಮ್ಮನ್ನು ಇಷ್ಟೊಂದು ಪ್ರೀತಿಯಿಂದ ಕಂಡ ತಮಗೆಲ್ಲರಿಗೂ ನನ್ನ ಕುಟುಂಬ ಸಮೇತವಾಗಿ ಧನ್ಯವಾದಗಳನ್ನು ತಿಳಿಸಿದರು.

ನಂತರ ಅಧ್ಯಕ್ಷ ಸ್ಥಾನ ವಹಿಸಿದ್ದ ಜಿಲ್ಲಾ ಕಾರಾಗೃಹದ ಅಧೀಕ್ಷಕರಾದ ಅನಿತಾ ಹಿರೇಮಠರವರು ಮಾತನಾಡಿ ರಾಜಕುಮಾರ ದೊಡ್ಡಮನಿಯವರು ರಾಯಚೂರಿನಿಂದ ಅಲಯಾಳ ಜೈಲಿಗೆ ಮುಂಬಡ್ತಿ ಹೊಂದಿರುವುದು ತುಂಬಾ ಸಂತೋಷವಾಗಿದೆ, ಅವರು ಒಬ್ಬ ಧಕ್ಷ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಫಲದಿಂದ ಪ್ರಮೋಷನ್ ಹೊಂದಿದ್ದಾರೆ, ಒಬ್ಬ ಅಧಿಕಾರಿ ನಮ್ಮ ಸಹಪಾಟಿಯಾಗಿ ಕಾರ್ಯ ನಿರ್ವಹಿಸುತ್ತ ಹೆಚ್ಚಿನ ಅಧಿಕಾರದೊಂದಿಗೆ ಬೆಳೆಯುತ್ತಿದ್ದಾನೆಂದರೆ ಅದಕ್ಕೆ ನಾವು ಸಂತೋಷಪಡಬೇಕು ಎಂದು ಹೇಳಿದರು.

ನಾವು ನಿಭಾಹಿಸುತ್ತಿರುವ ಕರ್ತವ್ಯದಲ್ಲಿ ಕೋಪ ತಾಪಗಳು ಸಹಜವಾಗಿಯೇ ಬರುತ್ತಿರುತ್ತವೆ ಆದರೆ ಅವುಗಳನ್ನು ತಡೆದುಕೊಳ್ಳುವ ತಾಳ್ಮೆ ಮನುಷ್ಯನಲ್ಲಿರಬೇಕು, ಕೋಪದಿಂದ ಯಾವುದೇ ಜಯಸಾಧಿಸಲು ಸಾಧ್ಯವೇ ಇಲ್ಲ ಏನೇ ಸಾಧಿಸಬೇಕಾದರೂ ತಾಳ್ಮೆ ಮತ್ತು ಶಾಂತಿಯಿಂದ ಮಾತ್ರ ಸಾಧ್ಯವೆಂದು ಹೇಳಿದರು, ಆದಯದರಿಂದ ರಾಜಕುಮಾರರವರನ್ನು ನನ್ನ ಮಗನನ್ನಾಗಿ ಸ್ವೀಕರಿಸಿದ್ದೇನೆ, ತಾಯಿಯ ಮಾತಿನಿಂದಾದರೂ ಇವನ ಕೋಪ ಸ್ವಲ್ಪ ತಣ್ಣಗಾಗಲಿ ಎಂದು ನಗೆ ಮಾತಿನಲ್ಲಿ ಹೇಳಿದರು. ಅವರ ಮಗನೂ ನನಗೆ ಮುಂದೆ ತಮ್ಮ ಆಸ್ತಿಯಲ್ಲಿ ಸ್ವಲ್ಪಭಾಗ ಅಜ್ಜಿಗೂ ಕೊಡುತ್ತೇನೆ ಎಂದು ಮಾತುಕೊಟ್ಟಿದ್ದಾನೆ ಎಂದು ನಗುನಗುತಾ ಹೇಳಿ ಮೊಮ್ಮಗನ ತಲೆ ಮೇಲೆ ತಮ್ಮ ಹಸ್ತವನ್ನಿಟ್ಟು ಆಶೀರ್ವದಿಸಿದರು, ಅಲಿಯಳದಲ್ಲಿ ತಮ್ಮ ಸೇವೆಯೊಂದಿಗೆ ಈ ನಿಮ್ಮ ತಾಯಿಯ ಮತ್ತು ಸಪ್ತಸ್ವರ ತಂಡದ ನೆನಪನ್ನು ಮರೆಯದೆ ಹಾಗೂ ಸೇವೆಯೊಂದಿಗೆ ತಮ್ಮ ಆರೋಗ್ಯದ ಕಡೆಗೂ ಗಮನವರಿಸಿ ಕರ್ತವ್ಯ ನಿಭಾಯಿಸಿ ಎಂದು ಹೇಳಿದರು.

ಸರ್ವರಿಗೂ ಪ್ರೀತಿ ಭೋಜನವನ್ನು ಏರ್ಪಡಿಸಲಾಯಿತ್ತು.

ಈ ಸಂದರ್ಭದಲ್ಲಿ ಈರಯ್ಯ ಹಿರೇಮಠ ಜೈಲ,ರ್ ವೆಂಕಟೇಶ ನಾಯಕ ಜೈಲ,ರ್ ತಾಯಪ್ಪ ಮರ್ಚಟಾಳ, ಮಾರುತಿ ಬಡಿಗೇರ, ವಿಜಯಕುಮಾರ ಕುದರಿ ಮುದಗಲ, ಮಲ್ಲಿಕಾರ್ಜುನ ಸಜ್ಜನ, ಯಲಗೋಡ, ಬಿ.ಬಿ. ಗೋಡಿಹಾಳ, ಸಣ್ಣಲಿಂಗ, ಕಲ್ಪನಾ ನಾಯಕ, ಚಂದ್ರಕಲಾ, ಮಹಾಲಕ್ಷ್ಮೀ, ಲಕ್ಷ್ಮೀ ಕೋತಿಗುಡ್ಡ, ಲಲಿತಾ, ಚಂದ್ರಕಲಾ ಹಾಗೂ ಸಪ್ತಸ್ವರ ಕರೋಕೆ ತಂಡದ ಸರ್ವ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಭಕ್ತರನ್ನು ಕೈಬೀಸಿ ಕರೆಯುತ್ತದೆ 2ನೇ ಮಸ್ಕಿ ಶ್ರೀಶೈಲ ಮಲ್ಲಿಕಾರ್ಜುನ ಬೆಟ್ಟ

ಭಕ್ತರು ದೂರ ದೂರದಿಂದ ಸುಂದರ ತಾಣವಾದ ಶ್ರೀಶೈಲ ಮಲ್ಲಿಕಾರ್ಜುನ ಬೆಟ್ಟಕ್ಕೆ ಕೈಬೀಸಿ ಕರೆಯುವ ದೃಶ್ಯವಾಗಿದೆ ಎಂದು ಭಕ್ತರಿಂದ ಧ್ವನಿ ಕೇಳಿ ಬರುತ್ತದೆ.

ವಿರುಪಾಕ್ಷಯ್ಯ ಸ್ವಾಮಿ ಸಾಲಿಮಠ ಅಂತರಗಂಗೆ ಮುಸ್ಕಿ

ಹಂಪಿ ವಿರೂಪಾಕ್ಷೇಶ್ವರ ಕಾಲೇಜಿನಲ್ಲಿ ರೆಡ್ ಕ್ರಾಸ್ ದಿನಾಚರಣೆ

ಮಾನವೀಯತೆಯ ನಿಸ್ವಾರ್ಥ ಸೇವೆ



ಹೊಸಪೇಟೆ,ಮೇ.13

ಕಮಲಾಪುರದ ಹಂಪಿ ಶ್ರೀ ವಿರೂಪಾಕ್ಷೇಶ್ವರ ಪದವಿ ಕಾಲೇಜಿನಲ್ಲಿ ಬುಧವಾರ ವಿಶ್ವ ರೆಡ್ ಕ್ರಾಸ್ ದಿನವನ್ನು ಅರ್ಥ ಪೂರ್ಣವಾಗಿ ಆಚರಿಸಲಾಯಿತು. ಸಂಸ್ಥೆಯ ಸಂಸ್ಥಾಪಕ ಹೆನ್ರಿ ಡ್ಯೂನಾಂಟ್ ಅವರ ಜನ್ಮದಿನದ ಸ್ಮರಣಾರ್ಥ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಲ್ಲಿ ಸೇವಾ ಮನೋ ಭಾವ ಮೂಡಿಸುವ ಕರೆ ನೀಡಲಾ ಯಿತು.

ಸಸಿಗೆ ನೀರೆರೆದು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ. ದೊಡ್ಮನಿಯವರು , ರೆಡ್ ಕ್ರಾಸ್ ಕೇವಲ ರಕ್ತದಾನಕ್ಕೆ ಸೀಮಿತವಾದ ಸಂಸ್ಥೆಯಲ್ಲ. 18ನೇ ಶತಮಾನ ದಿಂದಲೂ ನಿಸ್ವಾರ್ಥ ಸೇವೆಯ ಮೂಲಕ ಜಗತ್ತಿನಾದ್ಯಂತ ಮಾನವೀಯತೆಯ ಸಂದೇಶ ಸಾರುತ್ತಿದೆ. ಪ್ರವಾಹ, ಭೂಕಂಪ, ಚಂಡಮಾರುತದಂತಹ ನೈಸರ್ಗಿಕ ವಿಕೋಪಗಳ ವೇಳೆ ತಕ್ಷಣದ ನೆರವು, ವೈದ್ಯಕೀಯ ಚಿಕಿತ್ಸೆ , ಅಂಬ್ಯುಲೆನ್ಸ್ ಹಾಗೂ ಔಷಧಗಳ ವ್ಯವಸ್ಥೆಯಲ್ಲಿ ಸಂಸ್ಥೆ ಮುಂಚೂಣಿಯಲ್ಲಿದೆ ಎಂದರು.

21ನೇ ಶತಮಾನದಲ್ಲಿ ಮನುಷ್ಯತ್ವ ಮತ್ತು ಅಂತಃಕರಣದ ಮೌಲ್ಯಗಳು ಕ್ಷೀಣಿಸುತ್ತಿವೆ. ಯಾಂತ್ರಿಕ ಜೀವನದ ನಡುವೆ ರೆಡ್ ಕ್ರಾಸ್ ಸಂಸ್ಥೆಯ ನಿಸ್ವಾರ್ಥ ಸೇವೆ ನಮಗೆ ಮಾದರಿಯಾಗಬೇಕು. ಕೇವಲ ಪದವಿ ಪಡೆಯುವುದು ಶಿಕ್ಷಣದ ಗುರಿಯಾಗಬಾರದು. ಅನುದಾನಿತ ಕಾಲೇಜುಗಳ ಉನ್ನತ ವಿದ್ಯಾರ್ಹತೆಯ ಶಿಕ್ಷಕರು ಬದುಕಿನ ಪಾಠ ಕಲಿಸುತ್ತಾರೆ. ಇಲ್ಲಿ ಕಲಿತ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳು ಸಮಾಜಕ್ಕೆ ಮಾದರಿಯಾಗಬೇಕು ಎಂದು ಅತಿಥಿಗಳು ಕಿವಿಮಾತು ಹೇಳಿದರು.

ಕಮಲಾಪುರದ ಪ್ರಾಥಮಿಕ ಅರೋಗ್ಯ ಕೇಂದ್ರದ ಡಾ.ಸ್ವಪ್ನಾ ಕಟ್ಟಿಯವರು ಮಾತನಾಡಿ, ರಕ್ತದಾನದಿಂದ ಮನುಷ್ಯ ದೇವನಾಗಬಲ್ಲ, ಒಬ್ಬರ ರಕ್ತ ನಾಲ್ಕು ಜೀವಗಳನ್ನು ಉಳಿಸುತ್ತೆ, ಜೀವ ಉಳಿಸುವುದು ದೇವರಿಂದ ಮಾತ್ರ ಸಾಧ್ಯ ಆ ದೇವರ ಸ್ಥಾನವನ್ನು ರಕ್ತದಾನಿ ಪಡೆಯಬಲ್ಲ, ಆರೋಗ್ಯವಂತರು ಕನಿಷ್ಠ 60 ವರ್ಷದ ಜೀವಿತಾವಧಿಯಲ್ಲಿ 200 ಬಾರಿ ರಕ್ತದಾನ ಮಾಡಬಹುದು, ಇದರಿಂದಾಗಿ ರೋಗಿಯದಷ್ಟೆ ಅಲ್ಲ ರಕ್ತದಾನಿಯ ಆರೋಗ್ಯವು ಅತ್ಯುತ್ತಮವಾಗಿ ಸುಧಾರಣೆಯಾಗುತ್ತದೆ ಆದ್ದರಿಂದ ಪ್ರತಿಯೊಬ್ಬರೂ ರಕ್ತದಾನ ಮಾಡಿ ಅರೋಗ್ಯವಂತರಾಗಿ ಎಂದು ಕರೆ ನೀಡಿದರು.

ರೆಡ್ ಕ್ರಾಸ್ ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೇಖಾ ಪ್ರಕಾಶ್, ಎಂಸಿ ಸದಸ್ಯೆ ಅನ್ನಪೂರ್ಣ ಸದಾಶಿವ, ಕಾಲೇಜಿನ ಪ್ರಾಚಾರ್ಯರಾದ ಬಸವರಾಜ್ ಎಮ್ಮಿಗನೂರು , ಸಾಹಿತಿ ಸೋ. ದೋ. ವಿರುಪಾ ಕ್ಷಗೌಡ, ಕಾಲೇಜಿನ ಎನ್ಎಸ್ಎಸ್ ಘಟಕದ ಮುಖ್ಯಸ್ಥರಾದ ಕೆ. ವೀಣಾ, ಉಪನ್ಯಾಸಕಿ ಡಾ.ಉಮಾ ಮಾತನಾಡಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು, ಕಲಾವಿದ ಮುದೇನೂರು ಉಮಾಮಹೇಶ್ವರ ಆರೋಗ್ಯ ಗೀತೆ ಹಾಡಿದರು, ಕಾಲೇಜಿನ ಯುವ ರೆಡ್ ಕ್ರಾಸ್ ಘಟಕದ ಸಂಚಾಲಕರಾದ ಡಾ. ಸುರೇಂದ್ರ ಮಾನೇಮಿ ಪ್ರಸ್ತಾವಿಕವಾಗಿ ಮಾತನಾ ಡಿದರು, ವೆಂಕಟೇಶ್ ಬಡಿಗೇರ್ ಸ್ವಾಗತಿಸಿದರು, ಡಾ.ನಟರಾಜ್ ನಿರೂಪಿಸಿ ವಂದಿಸಿದರು.

ಬಳ್ಳಾರಿ: ವಸತಿ ನಿಲಯಗಳ ನೋಂದಣಿಗೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಆದೇಶ



ಬಳ್ಳಾರಿ,ಮೇ.13

ಜಿಲ್ಲೆಯಲ್ಲಿ 6 ರಿಂದ 18 ವರ್ಷದೊಳಗಿನ ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ, ಸರ್ಕಾರೇತರ ಹಾಗೂ ಅನುದಾನಿತ ವಸತಿ ನಿಲಯಗಳು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಸೂಚನೆ ನೀಡಿದ್ದಾರೆ.

'06 ರಿಂದ 18 ವರ್ಷದೊಳಗಿನ ಮಕ್ಕಳಿಗಾಗಿ ವಿವಿಧ ಇಲಾಖೆಗಳಡಿ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳ ಕಾರ್ಯವಿಧಾನಗಳ ಮಾರ್ಗಸೂಚಿಗಳು-2025' ಅನ್ನು ಜಾರಿಗೆ ತರಲು ಸರ್ಕಾರ ಆದೇಶಿಸಿದೆ. ಈ ಪ್ರಕಟಣೆ ಹೊರಡಿಸಿದ ದಿನದಿಂದ 2 ತಿಂಗಳೊಳಗೆ ಎಲ್ಲಾ ವಸತಿ ನಿಲಯಗಳು ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ ಎಂದು ಅವರು ತಿಳಿಸಿದ್ದಾರೆ.

ಸರ್ಕಾರಿ ವಸತಿ ನಿಲಯಗಳು ಆಯಾ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಮೂಲಕ ಜಿಲ್ಲಾಧಿಕಾರಿಯವರಿಗೆ ಅರ್ಜಿ ಸಲ್ಲಿಸಬೇಕು. ಸರ್ಕಾರೇತರ ಮತ್ತು ಅನುದಾನಿತ ವಸತಿ ನಿಲಯಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಿಗೆ ಅರ್ಜಿ ಸಲ್ಲಿಸಬೇಕು. ಮಾರ್ಗಸೂಚಿ-2025 ರಲ್ಲಿ ನೀಡಲಾಗಿರುವ 'ನಮೂನೆ-1' ರಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.


ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಅಥವಾ ನಗರದ ಕಂಟೋನ್‌ಮೆಂಟ್ ನ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಚೇರಿ (ದೂ.08392-241373) ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಲಸೂರು: ಅಗತ್ಯವಿರುವಷ್ಟು ಮೇವು ಲಭ್ಯ

ಬೀದರ, ಮೇ.13- ಪ್ರಸ್ತುತ ಹುಲಸೂರು ತಾಲ್ಲೂ ಕಿನಲ್ಲಿ ಪಶುಗಳಿಗೆ ಅಗತ್ಯವಿರುವಷ್ಟು ಮೇವು ಲಭ್ಯವಿದೆ ಮತ್ತು ತಾಲ್ಲೂಕಿನಲ್ಲಿ ಲಭ್ಯವಿರುವ ಒಣ ಹಾಗೂ ಹಸಿರು ಮೇವು ಸುಮಾರು 22 ವಾರಗಳ ಕಾಲ ಸಾಕಾಗುವಷ್ಟು ಸಂಗ್ರಹ ಇರುತ್ತದೆ ಎಂದು ಬೀದರ ಪಶುಪಾಲನಾ ಮತ್ತು ಪಶುವೈದ್ಯ ಕೀಯ ಸೇವಾ ಇಲಾಖೆಯ ಉಪನಿರ್ದೇಶಕರು (ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹುಲಸೂರು ತಾಲ್ಲೂಕು ವ್ಯಾಪ್ತಿಯಲ್ಲಿ ಮೇವಿನ ಕೊರತೆ ಉಂಟಾಗಿದೆ ಎಂಬ ಬಗ್ಗೆ ಇತ್ತೀಚೆಗೆ ಕೆಲವು ಪತ್ರಿಕೆಗಳಲ್ಲಿ ವರದಿಯಾಗಿ ರುವುದು ನಮ್ಮ ಗಮನಕ್ಕೆ ಬಂದಿ ರುತ್ತದೆ. ಪಶುಪಲನಾ ಇಲಾಖೆಯು ನಿರಂತವಾಗಿ ಮೇವಿನ ಲಭ್ಯತೆಯ ಮೇಲೆ ನಿಗಾ ಇರಿಸಿದ್ದು ಯಾವುದೇ ತುರ್ತು ಪರಿಸ್ಥಿತಿಯನ್ನು ಎದುರಿ ಸಲು ಸನ್ನದ್ದವಾಗಿದೆ ಎಂದು ಅವರು ತಿಳಿಸಿದ್ದಾರೆ.

ಜಿಲ್ಲಾ ಮಟ್ಟದ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆ

ತಾಯಿ ಮತ್ತು ಶಿಶು ಮರಣ ಪ್ರಮಾಣ ಶೂನ್ಯಕ್ಕೆ ಇಳಿಸಿ:ಜಿಲ್ಲಾಧಿಕಾರಿ



ಕೊಪ್ಪಳ ಮೇ 13

ಜಿಲ್ಲೆಯಲ್ಲಿ ಹೆರಿಗೆ ಸಂದರ್ಭದಲ್ಲಿ ಉಂಟಾಗುವ ತಾಯಿ ಮತ್ತು ಶಿಶು ಮರಣ ಪ್ರಮಾಣ ದರವನ್ನು ಶೂನ್ಯಕ್ಕೆ ಇಳಿಸಿ ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ್ ಅವರು ಹೇಳಿದರು.

ಮಂಗಳವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಿಳೆ ಗರ್ಭಿಣೆ ಎಂದು ತಿಳಿದ ಕೂಡಲೇ ಆಕೆಗೆ ತಾಯಿ ಕಾರ್ಡ್ ನೀಡಲಾಗುತ್ತದೆ. ಅದರಲ್ಲಿ ಪ್ರತಿ ಮಾಹೆಯ ತಪಾಸಣೆ ಹಾಗೂ ಮಹಿಳೆಯ ಆರೋಗ್ಯದ ಕುರಿತು ವಿವರ ಇರುತ್ತದೆ. ಹೆರಿಗೆ ಸಂದರ್ಭ ತಾಯಿ ಕಾರ್ಡ್ ಮಹತ್ವದ್ದಾಗಿದ್ದು, ಹೆರಿಗೆ ಸಮಯದ ಗಂಭೀರ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ. ಆದಾಗ್ಯೂ ಹೆರಿಗೆ ಸಂದರ್ಭ ಮಹಿಳೆಯ ರಕ್ತದೊತ್ತಡದಲ್ಲಿನ ಏರಿಳಿತಗಳಿಂದ ಸಾವಿನಂತಹ ದುರ್ಘಟನೆ ಸಂಭವಿಸುತ್ತವೆ. ಆದ್ದರಿಂದ ಪ್ರತಿ ಮಾಹೆ ಸಂಬಂಧಿಸಿದ ಆಶಾ ಕಾರ್ಯಕರ್ತೆಯರು ಗರ್ಭಿಣಿ ಮಹಿಳೆಯ ರಕ್ತದೊತ್ತಡ, ರಕ್ತಹೀನತೆ ಸಮಸ್ಯೆಗಳನ್ನು ಪರೀಕ್ಷಿಸಿ ವೈದ್ಯರಿಂದ ಸೂಕ್ತ ಔಷಧಿ ಒದಗಿಸಬೇಕು. ರಕ್ತಹೀನತೆ ಕೂಡ ಗರ್ಭಿಣಿ ಆರೋಗ್ಯಕ್ಕೆ ಮಾರಕವಾಗಬಲ್ಲದು. ಇದರಿಂದ ಹೆರಿಗೆ ಸಂದರ್ಭ ಸಾವು ಸಂಭವಿಸಬಹುದು. ಹೆರಿಗೆ ಸಂದರ್ಭ ಫಿಜಿಸಿಯನ್ ಕಡ್ಡಾಯವಾಗಿ ಇರಬೇಕು. ಗರ್ಭಿಣಿ ಕುಟುಂಬದವರೂ ಕೂಡ ಗರ್ಭಿಣಿಯ ಆರೋಗ್ಯ ಸ್ಥಿತಿಯ ಬಗ್ಗೆ ಯಾವುದೇ ಮುಚ್ಚು ಮರೆ ಇಲ್ಲದೆ ವೈದ್ಯರಿಗೆ ಮಾಹಿತಿ ನಿಡಬೇಕು. ಇದರಿಂದ ಅಗತ್ಯ ಚಿಕಿತ್ಸೆ ನೀಡಲು ವೈದ್ಯರಿಗೆ ಸಹಕಾರಿಯಾಗುತ್ತದೆ. ವೈದ್ಯರು ಸಹ ಯಾವುದೇ ತುರ್ತು ಪರಿಸ್ಥಿತಿಗೆ ಸಜ್ಜಾಗಿ ಹೆರಿಗೆ ಮಾಡಿಸಬೇಕು ಎಂದು ಹೇಳಿದರು.

ಮಗು ಜನನದ ನಂತರ ಮಗು ಸಂಪೂರ್ಣ ಆರೋಗ್ಯವಾಗಿದ್ದಾಗಲೂ ಜನನದ ಒಂದು ಅಥವಾ ಎರಡು ದಿನಗಳ ನಂತರ ಮಗು ಸಾವನ್ನಪುತ್ತದೆ. ಇದಕ್ಕೆ ಕಾರಣಗಳಿರಲೇ ಬೇಕು. ವೈದ್ಯಕೀಯ ಕಾರಣಗಳು ಏನೇ ಇದ್ದರೂ ಅಗತ್ಯ ಸಮಯದಲ್ಲಿ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಮಗುವಿನ ಪ್ರಾಣ ಉಳಿಸಬಹುದು. ಮಗುವಿನ ಜನನದ ನಂತರ ಕಂಡು ಬರುವ ಆರೋಗ್ಯ ಸಮಸ್ಯೆಗಳಿಗೆ ಕುಟುಂಬದವರು ಕಡ್ಡಾಯವಾಗಿ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ನೀಡಬೇಕು. ಮನೆ ವೈದ್ಯ ಅಥವಾ ಮನೆ ಮದ್ದು ನೀಡುವ ಸಾಹಸ ಮಡಬಾರದು. ಈ ಬಗ್ಗೆ ಹೆರಿಗೆಯ ನಂತರ ಮಹಿಳೆಯ ಕುಟುಂಬದವರಿಗೆ ವೈದ್ಯರು ತಿಳುವಳಿಕೆ ನೀಡಬೇಕು. ಜನನ ದಿನದಿಂದ ನಿಯಮಾನುಸಾರ ಮಗುವಿಗೆ ನಿಗದಿತ ಚುಚ್ಚುಮದ್ದುಗಳನ್ನು, ಲಸಿಕೆಗಳನ್ನು ಕಡ್ಡಾಯವಾಗಿ ಮಗುವಿಗೆ ಹಾಕಿಸಬೇಕು. ಈ ಬಗ್ಗೆ ತಾಯಿ ಕಾರ್ಡ್‌ನಲ್ಲಿ ದಾಖಲಿಸಬೇಕು ಎಂದು ಜಿಲ್ಲಾಧಿಕಾರಿಗಳು ವೈದ್ಯರಿಗೆ ಸೂಚಿಸಿದರು.

ಪಕ್ಕದ ಜಿಲ್ಲೆಗಳಿಂದ ಕೊನೆಯ ಹಂತದಲ್ಲಿ ಜಿಲ್ಲಾಸ್ಪತ್ರೆಗೆ ದಾಖಲಾಗಿ, ವೈದ್ಯರ ಪ್ರಯತ್ನದ ನಂತರವೂ ಹೆರಿಗೆ ಸಂದರ್ಭ ಮಹಿಳೆ ಮರಣ ಹೊಂದಿದರೂ ಅದು ಜಿಲ್ಲೆಯ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಅನ್ಯ ಜಿಲ್ಲೆಗಳಿಂದ ಇಲ್ಲಿಗೆ ಬರುವ ಗರ್ಭಿಣಿಯ ಆರೋಗ್ಯ ಸಂಬಂಧಿತ ವೈದ್ಯಕೀಯ ದಾಖಲೆಗಳನ್ನು ಮತ್ತು ಜಿಲ್ಲಾಸ್ಪತ್ರೆಗೆ ಶಿಫಾರಸ್ಸು ಮಾಡುವ ವೈದ್ಯರು ಈ ಬಗ್ಗೆ ಕರೆ ಮೂಲಕ ಇಲ್ಲಿನ ವೈದ್ಯರೊಂದಿಗೆ ಮಹಿಳೆಯ ಆರೋಗ್ಯ ತುರ್ತು ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಬೇಕು. ಈ ಬಗ್ಗೆ ಪಕ್ಕದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ವೈದ್ಯಾಧಿಕಾರಿಗಳೊಂದಿಗೆ ಸಭೆ ನಡೆಸಿ ಚರ್ಚಿಸಬೇಕು ಹಾಗೂ ಸೂಕ್ತ ಮಾಹಿತಿ ನೀಡಬೇಕು. ಯಾವುದೇ ಜಿಲ್ಲೆಯ ಮಹಿಳೆಯಾದರೂ ಅವರ ಜೀವ ಉಳಿಸುವುದು ವೈದ್ಯರ ಮೊದಲ ಆದ್ಯತೆಯಾಗಬೇಕು. ಈ ಮೂಲಕ ತಾಯಿ ಮತ್ತು ಶಿಶುವಿನ ಮರಣ ಪ್ರಮಾಣವನ್ನು ಶೂನ್ಯಕ್ಕೆ ಇಳಿಸಬೇಕು ಎಂದು ಅವರು ಸೂಚನೆ ನೀಡಿದರು. ಇನ್ನು ಸ್ವಲ್ಪ ದಿನಗಳಲ್ಲಿ ಮುಂಗಾ ರು ಆರಂಭವಾಗುತ್ತಿದ್ದು, ಮಳೆಗಾ ಲದಲ್ಲಿ ಹರಡುವ ಸಾಂಕ್ರಾಮಿಕ ರೋಗಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ. ಮಲೇರಿಯ, ಡೆಂಗ್ಯೂ, ಚಿಕುನ್‌ಗುನ್ಯಾ ದಂತಹ ಖಾಯಿ ಲೆಗಳಿಗೆ ಕಾರಣವಾಗುವ ಸೊಳ್ಳೆಗಳ ನಿರ್ಮೂಲನೆಗೆ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಅಗತ್ಯ ಕ್ರಮ ವಹಿಸಿ. ಕೈಗೊಳ್ಳಬೇಕಾದ ಮುಂಜಾ ಗ್ರತಾ ಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ. ಹಾವು ಕಡಿತ ಸಂದರ್ಭ ಕಡ್ಡಾಯವಾಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುವಂತೆ ತಿಳುವಳಿಕೆ ನೀಡಿ. ನಾಯಿ ಕಡಿತಕ್ಕೂ ನಿಗದಿತ ಲಸಿಕೆಗಳನ್ನು ಕಡ್ಡಾಯವಾಗಿ ಪಡೆಯಬೇಕು. ಇದರೊಂದಿಗೆ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಎಲ್ಲ ಅಗತ್ಯ ಮುನ್ನಚ್ಚರಿಕೆ ವಹಿಸಲು ಜಾಗೃತಿ ಕಾರ್ಯಕ್ರಗಳ ಮೂಲಕ ಜನರಲ್ಲಿ ಅರಿವು ಮೂಡಿಸಿ ಎಂದು ಜಿಲ್ಲಾಧಿಕಾರಿಗಳು ವೈದ್ಯರಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಲಿಂಗರಾಜು ಟಿ., ಜಿಲ್ಲಾ ಅನುಷ್ಠಾನಾಧಿಕಾರಿ ಡ.ರವೀಂದ್ರನಾಥ ಎಂ.ಎಚ್., ಜಿಲ್ಲಾ ಆರ್‌ಸಿಎಚ್ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪ್ರಕಾಶ ವಿ., ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ.ಪ್ರಕಾಶ ಎಚ್., ಜಿಲ್ಲಾ ಸರ್ವೇಕ್ಷಣಾ ಹಾಗೂ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ನಂದ ಕುಮಾರ, ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿ ಡಾ.ಗೋನಾಳ ಕುಮಾರ ಸ್ವಾಮಿ, ಕೊಪ್ಪಳ ಕಿಮ್ಸ್ ನ ವೈದ್ಯಕೀಯ ಅಧೀಕ್ಷಕ ಡಾ.ಮಂ ಜುನಾಥ, ತಜ್ಞ ವೈದ್ಯರಾದ ಡಾ.ಈಶ್ವರ ಸವಡಿ, ಫಿಜಿಸಿಯನ್ ಡಾ.ಸಂಗನಬಸಪ್ಪ, ಡಾ.ಸೋಮ ಶೇಖರ ಕೆ., ಜಿಲ್ಲಾ ಆಯುಷ್ ಅಧಿಕಾರಿ ಡಾ.ಪರ್ವತ ಗೌಡ ಹಾಗೂ ವಿವಿಧ ತಾಲ್ಲೂಕುಗಳ ಆರೋ ಗ್ಯಾಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಬಳ್ಳಾರಿ: ಮುಂದುವರೆದ ಸರ್ಕಾರಿ ಜಮೀನು ಒತ್ತುವರಿ ತೆರವು ಕಾರ್ಯಾಚರಣೆ

ಬಳ್ಳಾರಿ,ಮೇ 13-

ಜಿಲ್ಲೆಯ ಬಳ್ಳಾರಿ (ಗ್ರಾಮೀಣ) ವ್ಯಾಪ್ತಿಯಲ್ಲಿ ಬರುವ ಬೆಲೆಬಾಳುವ ಸರ್ಕಾರಿ ಜಮೀನುಗಳನ್ನು ಸಂರಕ್ಷಿಸುವ ಕಾರ್ಯ ಜಿಲ್ಲಾಡಳಿತದಿಂದ ಬುಧವಾರವೂ ಮುಂದುವರೆಯಿತು.

ಬಳ್ಳಾರಿ ಗ್ರಾಮೀಣ ವ್ಯಾಪ್ತಿಯ ಭುವನಗಿರಿ ಕಾಲೋನಿಯ ಅಶೋಕ್ ನಗರದ ಸರ್ವೆ ನಂಬರ್ 348 ರಲ್ಲಿನ ಒಟ್ಟು 11.59 ಎಕರೆ ಜಮೀನು ಕರ್ನಾಟಕ ಸರ್ಕಾರದ ಸ್ವತ್ತಾಗಿದ್ದು, ಬುಧವಾರ ಸ್ಥಳದಲ್ಲಿ ಜೆಸಿಬಿ ಯಂತ್ರಗಳ ಮೂಲಕ ಜಾಗವನ್ನು ಸಮತಟ್ಟುಗೊಳಿಸುವ ಮೂಲಕ ಗುರುತಿಸುವ ಕಾರ್ಯ ನಡೆಯಿತು.

ಒತ್ತುವರಿದಾರರಿಗೆ ಎಚ್ಚರಿಕೆ ನೀಡುವ ಫಲಕವನ್ನು ವಿವಾದಿತ ಸ್ಥಳದಲ್ಲಿ ಅಳವಡಿಸುವ ಮೂಲಕ ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದು ನಾಮಫಲಕದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಕಠಿಣ ಕಾನೂನು ಕ್ರಮದ ಎಚ್ಚರಿಕೆ:ಸರ್ಕಾರಿ ಜಮೀನುಗಳನ್ನು ಯಾರಾದರೂ ಒತ್ತುವರಿ ಮಾಡಿಕೊಂಡಲ್ಲಿ ಅಥವಾ ಅನಧಿಕೃತವಾಗಿ ಬಳಕೆ ಮಾಡಿದಲ್ಲಿ ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು. ಸಾರ್ವಜನಿಕರು ಇಂತಹ ಜಾಗಗಳ ಬಗ್ಗೆ ಜಾಗರೂಕರಾಗಿರಬೇಕು ಮತ್ತು ಸರ್ಕಾರದ ನಿಯಮಗಳನ್ನು ಪಾಲಿಸಬೇಕು ಎಂದು ಜಿಲ್ಲಾಡಳಿತ ಎಚ್ಚರಿಸಿದೆ. ತೆರವು ಕಾರ್ಯಾಚರಣೆಯಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್ ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ಬಳ್ಳಾರಿ ತಾಲ್ಲೂಕು ತಹಶೀಲ್ದಾರರಾದ ಟಿ.ರೇಖಾ ಹಾಗೂ ಕಂದಾಯ, ಪೊಲೀಸ್ ಅಧಿಕಾರಿಗಳು ಇದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಸರಕಾರಿ ಶಾಲೆ ಮುಚ್ಚುವ ಹುನ್ನಾರ : ಗಡ್ಡಿ-ಬಂಡ್ರಾಳ್ ಗ್ರಾಮಸ್ಥರ ಪ್ರತಿಭಟನೆ



ಗಂಗಾವತಿ,ಮೇ.13-

ತೀವ್ರ ವಿರೋಧದ ನಡುವೆ ಶಾಲೆ ಮುಚ್ಚಲು ಮುಂದಾಗಿರುವ ಸರ್ಕಾರದ ವಿರುದ್ಧ ನಮ್ಮೂರ ಶಾಲೆ ನಮ್ಮಯ ಕಣ್ಮಣಿ ಎನ್ನುವ ಬ್ಯಾನರ್ ಅಡಿಯಲ್ಲಿ ಗಡ್ಡಿ-ಬಂಡ್ರಾಳ್ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ತಾಲೂಕಿನ ಬಂಡ್ರಾಳ್ ಮತ್ತು ಗಡ್ಡಿ ಗ್ರಾಮಗಳಲ್ಲಿ ನಮ್ಮೂರ ಶಾಲೆ ನಮ್ಮಯ ಕಣ್ಮಣಿ ಎಂಬ ಬ್ಯಾನರ್ ನಲ್ಲಿ ಎಸ್ ಡಿ ಎಮ್ ಸಿ ಪದಾಧಿಕಾರಿಗಳು, ಪೋಷಕರು, ಗ್ರಾಮಸ್ಥರು ಹಾಗೂ ಶಿಕ್ಷಣ ಉಳಿಸಿ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ನಮ್ಮೂರ ಶಾಲೆ ಮುಚ್ಚಲು ನಾವು ಎಂದಿಗೂ ಬಿಡುವುದಿಲ್ಲ ಎಂದು ಘೋಷಣೆ ಹಾಕಿದ ಗ್ರಾಮಸ್ಥರು ನಮ್ಮೂರ ಶಾಲೆ ಉಳಿಯಬೇಕು ಮತ್ತು ಕೆಪಿಎಸ್ ಯೋಜನೆ ರದ್ದಾಗಬೇಕೆಂದು ಆಗ್ರಹಿಸಿದರು. ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ರಚಿಸಿಕೊಂಡು ಕಳೆದ 5 ತಿಂಗಳಿಂದ ಗ್ರಾಮಸ್ಥರು ಹಾಗೂ ಪೋಷಕರು ಹೋರಾಟ ನಡೆಸಿದ್ದೇವೆ. ಗ್ರಾಮ ಮಟ್ಟದಿಂದ ಆರಂಭಿಸಿ ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟದ ವರೆಗೂ ಪ್ರತಿಭಟನೆ ಹಾಗೂ ಸಮಾವೇಶಗಳನ್ನು ನಡೆಸಿದ್ದೇವೆ.

ನಾಡಿನ ಹೆಸರಾಂತ ಸಾಹಿತಿಗಳು ಹಾಗೂ ಶಿಕ್ಷಣ ತಜ್ಞರು ನಮ್ಮೊಂದಿಗೆ ಧ್ವನಿಗೂಡಿಸಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದರು.

ಬಡವರ ರೈತ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾದರೂ ಪರವಾಗಿಲ್ಲ, ಕೆಪಿಎಸ್ ಯೋಜನೆಯನ್ನು ಜಾರಿಗೊಳಿಸಲು ಮುಂದಾಗಿದೆ.

ಕರ್ನಾಟಕ ರಾಜ್ಯ ಸರ್ಕಾರವು ಬಜೆಟ್ ನಲ್ಲಿ ಘೋಷಿಸಿ ರುವಂತೆ ಜೂನ್ ನಿಂದಲೇ ಹೊಸ ಕೆಪಿಎಸ್ ಶಾಲೆಗಳನ್ನು ಆರಂಭಿಸಲಾ ಗುತ್ತಿದೆ. ಇಲ್ಲಿ 3 ರಿಂದ 5 ಕಿ. ಮೀ ವ್ಯಾಪ್ತಿಯ ಶಾಲೆಗಳನ್ನು ವಿಲೀ ನಗೊಳಿಸಲಾಗುವುದೆಂದು 15 ಅಕ್ಟೋಬರ್ 2025ರ ಆದೇಶವು ತಿಳಿಸುತ್ತದೆ. ಈ ಕುರಿತು ಪಟ್ಟಿ ಕೂಡ ದೊರೆತಿದೆ ಹಾಗೂ ಮುಂದುವರೆದು ರಾಜ್ಯ ಸರ್ಕಾರವು ಮೂರು ವರ್ಷ ಗಳಲ್ಲಿ ದೇಶದಲ್ಲೇ ಅತ್ಯುತ್ತಮ ಸರ್ಕಾರಿ ಶಾಲೆ ವ್ಯವಸ್ಥೆಯನ್ನು ರೂಪಿಸಲಾಗುವುದು ಎಂದು ನೆಪ ಹೇಳುತ್ತಾ. ಎಂಟು ಶಿಕ್ಷಣದ ಗ್ಯಾರಂಟಿಗಳನ್ನು ಘೋಷಿಸುತ್ತಾ ರಾಜ್ಯದ ಜನತೆಗೆ ವಿಶ್ವಾಸದ್ರೋಹ ಬಗೆದಿದ್ದಾರೆಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಬೆಚ್ಚಿಬೀಳಿಸುವ ಹಠಾತ್ ಸಾವುಗಳು; ಬೆದರದ ಸರ್ಕಾರಗಳು!



ಜನರಲ್ಲಿ ಭಯ, ಗೊಂದಲ ಮತ್ತು ಅನುಮಾನ ಹೆಚ್ಚುತ್ತಿರುವಾಗ ಸರ್ಕಾರಗಳು ಪಾರದರ್ಶಕ ಮಾಹಿತಿಯನ್ನು ನೀಡಬೇಕು. ಹಠಾತ್ ಸಾವುಗಳ ಕುರಿತು ಸಮಗ್ರ ರಾಷ್ಟ್ರೀಯ ಅಧ್ಯಯನ ನಡೆಸಬೇಕು. ಸಾಮಾನ್ಯರ ಸಾವು ಕೂಡ ಸರ್ಕಾರಕ್ಕೆ ಮುಖ್ಯವೆನಿಸಬೇಕು. ಇದು ಗಂಭೀರ ಆರೋಗ್ಯ ಸಮಸ್ಯೆ ಎಂಬುದನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅರಿಯಬೇಕು.

ನಟ, ನಿರ್ದೇಶಕ, ನಿರ್ಮಾಪಕ ದಿಲೀಪ್ ರಾಜ್ ಅವರ ಹಠಾತ್ ಸಾವು, ಜನಸಾಮಾನ್ಯರನ್ನು ಬೆಚ್ಚಿಬೀಳಿಸಿದೆ. ಕೇವಲ 47ರ ಹರೆಯದ ಆರೋಗ್ಯವಂತ ದೇಹ, ಲವಲವಿಕೆಯ ಸ್ವಭಾವ, ಸ್ನೇಹಜೀವಿ ದಿಲೀಪ್ ರಾಜ್, ಹಠಾತ್ ಹೃದಯಾಘಾತದಿಂದ ಸಾವಿಗೀಡಾದದ್ದನ್ನು ನಂಬುವುದು ಕಷ್ಟವಾಗಿದೆ. ಅರಗಿಸಿಕೊಳ್ಳುವುದು ಅಸಾಧ್ಯವಾಗಿದೆ.

ದಿಲೀಪ್ ರಾಜ್ ರಂಗಭೂಮಿ, ಸಿನೆಮಾ, ಕಿರುತೆರೆ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದರು. ನಟನೆ, ನಿರ್ದೇಶನ, ನಿರ್ಮಾಣ ಕಾರ್ಯದಲ್ಲಿ ನಿರತರಾಗಿದ್ದರು. ಜನಪ್ರಿಯ ವ್ಯಕ್ತಿಯಾಗಿದ್ದರು. ಅಂತಹ ವ್ಯಕ್ತಿಗೆ ಹಠಾತ್ ಸಾವು ಸಂಭವಿಸಿತು ಎಂದಾಕ್ಷಣ ನೆನಪಾಗಿದ್ದು- 46ರ ಹರೆಯದ ನಟ ಪುನೀತ್ ರಾಜಕುಮಾರ್ ಅವರ ಹಠಾತ್ ಸಾವು. ಕಾಕತಾಳೀಯವೋ ಏನೋ, ಮಿಲನ ಎಂಬ ಚಿತ್ರದಲ್ಲಿ ಒಬ್ಬರು ನಾಯಕರಾದರೆ, ಮತ್ತೊಬ್ಬರು ಖಳನಾಯಕರಾಗಿ ನಟಿಸಿದ್ದರು. ಫಿಟ್‌ನೆಸ್ ಬಗ್ಗೆ ಇಬ್ಬರೂ ಅತೀವ ಆಸಕ್ತಿ ಹೊಂದಿದ್ದರು. ಇಬ್ಬರ ವಯಸ್ಸು ಹೆಚ್ಚೂಕಡಿಮೆ ಒಂದೇ. ಹಾಗಾಗಿ ಇವರಿಬ್ಬರ ಹಠಾತ್ ಸಾವಿನಲ್ಲಿ ಸಾಮ್ಯತೆ ಇರುವಂತಿದೆ. ಆ ಕಾರಣಕ್ಕಾಗಿಯೇ ಹಠಾತ್ ಸಾವುಗಳ ಕುರಿತು ಸಾರ್ವಜನಿಕ ವಲಯದಲ್ಲಿ ಗಂಭೀರ ಚರ್ಚೆಗಳು ನಡೆಯುತ್ತಿವೆ.

ಇತ್ತೀಚಿಗೆ ವರ್ಷಗಳಲ್ಲಿ ಹಠಾತ್ ಸಾವುಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ. ವಿಶೇಷವಾಗಿ ಯುವಕರು, ಕೆಲಸದ ಒತ್ತಡದಲ್ಲಿರುವವರು, ವ್ಯಾಯಾಮ ಮಾಡುವಾಗ ಕುಸಿದು ಬೀಳುವವರು ಅಥವಾ ಯಾವುದೇ ದೊಡ್ಡ ಕಾಯಿಲೆ ಇಲ್ಲದಿದ್ದರೂ ಸಾಯುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದು ಸಹಜವಾಗಿಯೇ ಜನರ ಆತಂಕಕ್ಕೆ, ಕಳವಳಕ್ಕೆ ಕಾರಣವಾಗುತ್ತಿದೆ.

ಇದೇ ಸಂದರ್ಭದಲ್ಲಿ, ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ() ವರದಿ ಹೊರಬಿದ್ದಿದೆ. ಆ ವರದಿಯ ಪ್ರಕಾರ, ಭಾರತದಲ್ಲಿ ಪ್ರತಿದಿನ 52 ಮಂದಿ ಹಠಾತ್ ಸಾವಿಗೆ ಬಲಿಯಾಗುತ್ತಿದ್ದಾರೆ. 2022ರಲ್ಲಿ ಹೃದಯ ಸಂಬಂಧಿ ಸಾವುಗಳ ಸಂಖ್ಯೆಯಲ್ಲಿ ಶೇ. 12.5ರಷ್ಟು ಏರಿಕೆಯಾಗಿದೆ. ಹಠಾತ್ ಸಾವಿಗೆ 2023ರಲ್ಲಿ 63,609; 2024ರಲ್ಲಿ 76,024 ಮಂದಿ ಬಲಿಯಾಗಿದ್ದಾರೆ. ಅದರಲ್ಲೂ 30ರಿಂದ 60ರ ಮಧ್ಯವಯಸ್ಕರಲ್ಲಿಯೇ ಹೆಚ್ಚಾಗಿ ಹಠಾತ್ ಸಾವು ಸಂಭವಿಸಿದೆ. ಇದು ಕೇವಲ ಅಂಕಿ-ಅಂಶಗಳಲ್ಲ, ನೂರಾರು ಕುಟುಂಬಗಳ ಆಧಾರಸ್ತಂಭಗಳು ಕುಸಿದ ಕಹಿ ಸತ್ಯ.

ಈ ಹಠಾತ್ ಸಾವುಗಳಿಗೆ ಹೃದಯ ಸಂಬಂಧಿ ಕಾಯಿಲೆಗಳು, ಆಹಾರ ಕ್ರಮಗಳು, ಕೋವಿಡ್ ನಂತರದ ಆರೋಗ್ಯ ಸಮಸ್ಯೆಗಳು, ಜೀವನಶೈಲಿಯ ಬದಲಾವಣೆ, ಮಾನಸಿಕ ಒತ್ತಡ ಮತ್ತು ಆತಂಕ, ನಿಗದಿತ ಆರೋಗ್ಯ ತಪಾಸಣೆ ಮಾಡಿಸದಿರುವುದೇ ಪ್ರಮುಖ ಕಾರಣಗಳು ಎಂದು ತಜ್ಞರು ತಿಳಿಸಿದ್ದಾರೆ. ಆದರೆ, ದಿಲ್ಲಿಯ ಆಸ್ಪತ್ರೆಯೊಂದು 2019ರ ಜನವರಿಯಿಂದ 2025ರ ಜನವರಿವರೆಗೆ ಸುಮಾರು 6,139 ಮಂದಿ ಹೃದ್ರೋಗಿಗಳನ್ನು ಸಂಶೋಧನೆಗೆ ಒಳಪಡಿಸಿದೆ. ಆ ಸಂಶೋಧನಾ ವರದಿ ಪ್ರಕಾರ, ಹೃದಯದ ರಕ್ತನಾಳದಲ್ಲಿ ಹೃದಯದ ಸ್ನಾಯುಗೆ ರಕ್ತ ಸರಬರಾಜು ಹಠಾತ್ ಆಗಿ ನಿಲ್ಲುವ ಗಂಭೀರ ತೊಂದರೆಯ ಕಾರಣಕ್ಕೆ ಹೃದಯಾಘಾತ ಸಂಭವಿಸುತ್ತದೆ ಎನ್ನಲಾಗಿದೆ.

ಜೊತೆಗೆ, ವೈದ್ಯಕೀಯ ವಲಯದ ಅಧ್ಯಯನಗಳು- ಕೋವಿಡ್ ನಂತರ ಹೃದಯ ಸಂಬಂಧಿ ಸಮಸ್ಯೆಗಳು, ರಕ್ತ ಹೆಪ್ಪುಗಟ್ಟುವಿಕೆ, ಶ್ವಾಸಕೋಶದ ಹಾನಿ, ಮಾನಸಿಕ ಒತ್ತಡ ಮತ್ತು ಜೀವನಶೈಲಿಯ ಬದಲಾವಣೆಗಳು ಜನರ ಆರೋಗ್ಯದ ಮೇಲೆ ದೀರ್ಘಕಾಲೀನ ಪರಿಣಾಮ ಬೀರಿವೆ ಎಂದು ಸ್ಪಷ್ಟಪಡಿಸುತ್ತಿವೆ. ಸೋಂಕಿನಿಂದ ಗುಣಮುಖರಾದ ಬಳಿಕವೂ ಕೆಲವರಿಗೆ ದೌರ್ಬಲ್ಯ, ಉಸಿರಾಟದ ತೊಂದರೆ, ಅಸಹಜ ಹೃದಯ ಬಡಿತ ಮುಂದುವರಿದಿದೆ. ಇದೇ ಕಾರಣದಿಂದ ಯುವಕರಲ್ಲೂ ಹಠಾತ್ ಹೃದಯಾಘಾತ ಪ್ರಕರಣಗಳು ಹೆಚ್ಚಾಗಿರಬಹುದು ಎನ್ನಲಾಗುತ್ತಿದೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಕೋವಿಡ್ ಸೋಂಕಿನ ಅಲೆಗಳು ಕಡಿಮೆಯಾದ ಬಳಿಕ, ಹಠಾತ್ ಸಾವುಗಳು ಏಕೆ ಹೆಚ್ಚುತ್ತಿವೆ ಎಂಬುದಾಗಿದೆ. ಕೆಲವೇ ಕ್ಷಣಗಳ ಹಿಂದೆ ಆರೋಗ್ಯವಂತರಂತೆ ಕಾಣುತ್ತಿದ್ದ ಯುವಕ-ಯುವತಿಯರು ಕುಸಿದು ಬೀಳುವುದು, ಪ್ರಾಣ ಕಳೆದುಕೊಳ್ಳುವುದು ಜನರಲ್ಲಿ ಭಯ ಮತ್ತು ಅನುಮಾನಗಳನ್ನು ಹುಟ್ಟಿಸಿದೆ.

ಆ ಅನುಮಾನಗಳನ್ನು ಪರಿಹರಿಸಬೇಕಾದ ಸರ್ಕಾರಗಳು ಮೌನಕ್ಕೆ ತಲೆಬಾಗಿವೆ. ಹಠಾತ್ ಸಾವುಗಳ ಕುರಿತು ಸಾಮಾಜಿಕ ಜಾಲತಾಣಗಳು ಜೀವಂತವಾಗಿವೆ, ವದಂತಿಗಳನ್ನು ಹಬ್ಬಿಸುತ್ತಿವೆ. ಇದು ಸಹಜವಾಗಿಯೇ ಜನಸಾಮಾನ್ಯರನ್ನು ಗೊಂದಲಕ್ಕೆ ದೂಡುತ್ತದೆ. ಅದಕ್ಕೆ ಪೂರಕವಾಗಿ ಕೊರೋನ ಲಸಿಕೆಗಳಿಂದ ಅಡ್ಡ ಪರಿಣಾಮಗಳಾಗಬಹುದು ಎನ್ನುವುದನ್ನು ಲಸಿಕೆ ತಯಾರಿಕೆಯ ಕಂಪೆನಿಗಳು ಒಪ್ಪಿಕೊಂಡಿದ್ದೂ ಇದೆ. ಕೋವಿಡ್ ಕಾಲದಲ್ಲಿ, ಸಾವು-ಬದುಕಿನ ನಡುವೆ ಹೋರಾಡುತ್ತಿರುವಾಗ, ತುರ್ತು ಚಿಕಿತ್ಸೆಯ ಅನಿವಾರ್ಯತೆ ಎದುರಾದಾಗ, ಪ್ರಧಾನಿ ಮೋದಿಯವರೇ ಲಸಿಕೆ ಕಡ್ಡಾಯ ಎಂದರು. ಅಕಸ್ಮಾತ್, ಈಗ ಸಂಭವಿಸುತ್ತಿರುವ ಹಠಾತ್ ಸಾವುಗಳಿಗೆ ಆ ಲಸಿಕೆ ಕಾರಣವಾದರೆ, ಮೋದಿಯವರು ಆ ಸಾವುಗಳ ಹೊಣೆ ಹೊರಬೇಕಾಗುತ್ತದಲ್ಲವೇ?

ಕರೋನೋತ್ತರ ದಿನಗಳಲ್ಲಿ ಹಠಾತ್ ಸಾವುಗಳಿಗೂ ಲಸಿಕೆಗೂ ಸಂಬಂಧವಿದೆಯೇ ಎನ್ನುವ ಪ್ರಶ್ನೆಯನ್ನು ಹಿರಿಯ ಪತ್ರಕರ್ತರಾದ ರಾಜಾರಾಂ ತಲ್ಲೂರು ಅವರು ಸಾರ್ವಜನಿಕ ಚರ್ಚೆಯ ವಿಷಯವನ್ನಾಗಿಸಿದ್ದರು. ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಪತ್ರ ಕೂಡ ಬರೆದಿದ್ದರು. ಇದೇ ಸಮಯದಲ್ಲಿ ಹಾಸನ ಜಿಲ್ಲೆಯಲ್ಲಿ, ಒಂದೇ ತಿಂಗಳಿನಲ್ಲಿ 20 ಜನರ ಹಠಾತ್ ಸಾವು ಸಂಭವಿಸಿ ರಾಜ್ಯದ ಜನತೆಯನ್ನು ಬೆಚ್ಚಿಬೀಳಿಸಿತ್ತು. ಒಂದು ಕಡೆಯಿಂದ ಪತ್ರ, ಮತ್ತೊಂದು ಕಡೆಯಿಂದ ಹಠಾತ್ ಸಾವುಗಳು- ಇದರಿಂದ ಎಚ್ಚೆತ್ತ ರಾಜ್ಯ ಸರಕಾರ ಡಾ. ರವೀಂದ್ರ ನಾಥ್ ನೇತೃತ್ವದಲ್ಲಿ ಸಮಿತಿ ರಚಿಸಿತು. ಹತ್ತು ದಿನಗಳ ಒಳಗೆ ವರದಿ ಕೊಡಲು ಆದೇಶಿಸಿತು. ಸಮಿತಿಯೂ ಅಷ್ಟೇ ಆತುರದಲ್ಲಿ ವರದಿ ನೀಡಿತು. ಹೃದಯಾಘಾತಗಳಿಗೆ ಜೀವನ ಶೈಲಿಯೇ ಮುಖ್ಯ ಕಾರಣ ಎಂದು ಷರಾ ಬರೆಯಿತು. ಅಲ್ಲಿಗೆ ಸರ್ಕಾರ ಸುಮ್ಮನಾಯಿತು.

ಅದೇ ರೀತಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ () ನಡೆಸಿದ ಸುದೀರ್ಘ ಅಧ್ಯಯನವು, ಕರೋನಾ ಲಸಿಕೆ ಪಡೆದಿದ್ದರಿಂದ ಹಠಾತ್ ಸಾವುಗಳು ಸಂಭವಿಸುತ್ತಿಲ್ಲ ಎಂದಿತು. ಆ ಮೂಲಕ ಲಸಿಕೆ ಪೂರೈಕೆ ಮಾಡಿದ ಕಂಪನಿಗಳನ್ನು ಆರೋಪಗಳಿಂದ ಮುಕ್ತಗೊಳಿಸಿತು. ಅಲ್ಲಿಗೆ, ಆ ಕಂಪನಿಗಳಿಂದ ಕೋಟಿಗಟ್ಟಲೆ ಚುನಾವಣೆ ಬಾಂಡ್ ಮೂಲಕ ಹಣ ಪಡೆದಿದ್ದ ಬಿಜೆಪಿ ಕೂಡ ಬಚಾವಾಯಿತು.

ಪರಿಸ್ಥಿತಿ ಹೀಗಿರುವಾಗ, ಸರ್ಕಾರಗಳ ಪಾತ್ರ ಅತ್ಯಂತ ಮುಖ್ಯವಾಗುತ್ತದೆ. ಜನರಲ್ಲಿ ಭಯ, ಗೊಂದಲ ಮತ್ತು ಅನುಮಾನ ಹೆಚ್ಚುತ್ತಿರುವಾಗ ಸರ್ಕಾರಗಳು ಪಾರದರ್ಶಕ ಮಾಹಿತಿಯನ್ನು ನೀಡಬೇಕು. ಹಠಾತ್ ಸಾವುಗಳ ಕುರಿತು ಸಮಗ್ರ ರಾಷ್ಟ್ರೀಯ ಅಧ್ಯಯನ ನಡೆಸಬೇಕು. ಯುವಜನತೆಯಲ್ಲಿ ಹೃದಯ ಸಂಬಂಧಿ ತಪಾಸಣೆ, ಸಾರ್ವಜನಿಕ ಆರೋಗ್ಯ ಜಾಗೃತಿ, ಕೆಲಸದ ಸ್ಥಳಗಳಲ್ಲಿ ಆರೋಗ್ಯ ಪರೀಕ್ಷೆ ಮತ್ತು ಮಾನಸಿಕ ಆರೋಗ್ಯ ಸೇವೆಗಳನ್ನು ಬಲಪಡಿಸುವತ್ತ ಗಮನ ಹರಿಸಬೇಕು.

ಹಾಗೆಯೇ ಜನಪ್ರಿಯ ನಟರೊಬ್ಬರ ಸಾವು ಸಂಭವಿಸಿದಾಗ ಚರ್ಚೆ ಮುನ್ನಲೆಗೆ ಬರುವುದಲ್ಲ; ಸಾಮಾನ್ಯರ ಸಾವು ಕೂಡ ಸರ್ಕಾರಕ್ಕೆ ಮುಖ್ಯವೆನಿಸಬೇಕು. ಕೇವಲ ಭಯ ಬೇಡ ಎಂದು ಹೇಳುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ; ಇದು ಗಂಭೀರ ಆರೋಗ್ಯ ಸಮಸ್ಯೆ ಎಂಬುದನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅರಿಯಬೇಕು.

ಹಿಜಾಬ್ ಜೊತೆ ಜನಿವಾರಕ್ಕೂ ಅವಕಾಶ : ಬಿಜೆಪಿಯವರ ವಿರೋಧವೇಕೆ?



ಹಿಜಾಬ್‌ಗೆ ಅವಕಾಶ ಕೊಟ್ಟಿರುವುದು ದೊಡ್ಡ ಅಪರಾಧವೆಂಬಂತೆ ಬಿಂಬಿಸುತ್ತಿರುವವರು, ಜನಿವಾರಕ್ಕೆ ಅವಕಾಶ ಕೊಟ್ಟಿರುವ ಬಗ್ಗೆ ಯಾಕೆ ಟೀಕಿಸುತ್ತಿಲ್ಲ. ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬೇಟಿ ಬಚಾವೋ, ಬೇಟಿ ಪಡಾವೋ ಎನ್ನುವ ಕಾರ್ಯಕ್ರಮವನ್ನು ಜಾರಿಗೆ ತರುತ್ತಾರೆ. ಇದರ ಮೂಲಕ ಹೆಣ್ಣುಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುವ ಮಾತನಾಡುತ್ತಾರೆ. ಆದರೆ ರಾಜ್ಯದಲ್ಲಿ ಅವರದೇ ಪಕ್ಷದ ನಾಯಕರು ಬೇಟಿ ಪಡಾವೋ (ಹೆಣ್ಣು ಮಕ್ಕಳ ಶಿಕ್ಷಣ) ವಿರೋಧಿಸುತ್ತಾರೆ.

ರಾಜ್ಯ ಸರ್ಕಾರ 13 ಮೇ 2026ರಂದು ಮಹತ್ವದ ತೀರ್ಮಾನವನ್ನು ಕೈಗೊಂಡಿದೆ. ಶಾಲಾ-ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸಲು ಅನುಮತಿ ನೀಡಿದಂತೆ, ಬೇರೆ ಧರ್ಮದವರು ಅವರ ಆಚರಣೆಯಂತೆ ಜನಿವಾರವನ್ನು, ರುದ್ರಾಕ್ಷಿ, ಟರ್ಬನ್ ಸೇರಿದಂತೆ ಅವರ ಸಾಂಪ್ರದಾಯಿಕ ಸಂಕೇತಗಳನ್ನು ಬಳಸುವಂತೆ ಆದೇಶದಲ್ಲಿ ತಿಳಿಸಿದೆ.

2022ರಲ್ಲಿ ಬಸವರಾಜ್ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಶಾಲಾ-ಕಾಲೇಜುಗಳಲ್ಲಿ ವಸ್ತ್ರಸಂಹಿತೆ ನಿಗದಿಪಡಿಸಿ ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿದೆ. ಮೇ 13ರ ಪತ್ರಿಕಾಗೋಷ್ಠಿಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಶಾಸಕ ರಿಜ್ವಾನ್ ಅರ್ಷದ್ ಜೊತೆಗೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಈ ವಿಚಾರವನ್ನು ತಿಳಿಸಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆದೇಶದಂತೆ, 12ನೇ ಶತಮಾನದ ಕ್ರಾಂತಿಕಾರಿ ಬಸವಣ್ಣನವರು ಇವ ನಮ್ಮವ, ಇವ ನಮ್ಮವ ಎನ್ನುವ ಮೂಲಕ ಎಲ್ಲರನ್ನೂ ಒಳಗೊಳ್ಳುವ ಚಿಂತನೆಯನ್ನು ನೀಡಿದ್ದರು. ಅದನ್ನು ಅನುಷ್ಠಾನಗೊಳಿಸುವ ಆಶಯವನ್ನು ರಾಜ್ಯ ಸರ್ಕಾರ ಹೊಂದಿದೆ ಎಂದು ಈ ಹಿಂದಿನ ಬಜೆಟ್ ವೇಳೆ ಸಿದ್ದರಾಮಯ್ಯನವರು ಹೇಳಿದ್ದರು. ವಿಶೇಷವಾಗಿ ವಿದ್ಯಾರ್ಥಿಗಳಲ್ಲಿ ಸಮಾನತೆ ಹಾಗೂ ಸೌಹಾರ್ದತೆಗೆ ನೆರವಾಗಲು ಈ ಆದೇಶವನ್ನು ಕೈಗೊಳ್ಳಲಾಗಿದೆ.

ಮಧುಬಂಗಾರಪ್ಪ ಅವರು ಹೇಳಿದಂತೆ ಸಾಂಪ್ರದಾಯಿಕ ಹಾಗೂ ಆಚರಣೆ ಆಧರಿಸಿದ ಸಂಕೇತಗಳನ್ನು ಧರಿಸುವಂತೆ ಅಥವಾ ಬಲವಂತವಾಗಿ ತೆಗೆಯುವಂತೆ ವಿದ್ಯಾರ್ಥಿಗಳನ್ನು ಒತ್ತಾಯ ಮಾಡುವಂತಿಲ್ಲ. ಶಿಸ್ತು, ಸುರಕ್ಷತೆ ಮತ್ತು ವಿದ್ಯಾರ್ಥಿಯ ಗುರುತಿಸುವುದಕ್ಕೆ ಅಡ್ಡಿಯಾಗದಂತೆ ನಿಗದಿತ ಸಮವಸ್ತ್ರದೊಂದಿಗೆ ಸಮಾನ ಸ್ವರೂಪದ ಸಾಂಪ್ರದಾಯಿಕ ಹಾಗೂ ಆಚರಣೆ ಆಧರಿಸಿದ ಸಂಕೇತಗಳನ್ನು ಧರಿಸಬಹುದು. ಅಂತಹ ವಿದ್ಯಾರ್ಥಿಗಳಿಗೆ ಯಾವುದೇ ಶಿಕ್ಷಣ ಸಂಸ್ಥೆ ತರಗತಿ ಅಥವಾ ಪರೀಕ್ಷಾ ಕೊಠಡಿ ಪ್ರವೇಶಕ್ಕೆ ಅವಕಾಶ ನಿರಾಕರಿಸುವಂತಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಅದೇ ಪತ್ರಿಕಾಗೋಷ್ಠಿಯಲ್ಲಿ ಆರೋಗ್ಯ ಸಚಿವ ದಿನೇಶ್‌ಗುಂಡೂರಾವ್ ಅವರು ಮಾತನಾಡಿ ಕಳೆದ ತಿಂಗಳು ಸಿಇಟಿ ಪರೀಕ್ಷೆಯ ವೇಳೆ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು. ಇಂತಹ ಘಟನೆಗಳು ಮರುಕಳಿಸಬಾರದು ಎಂಬ ಉದ್ದೇಶದಿಂದ ಸರ್ಕಾರ ಈ ತೀರ್ಮಾನವನ್ನು ಕೈಗೊಂಡಿದೆ ಎಂದು ತಿಳಿಸಿದ್ದಾರೆ.

ಈ ಹಿಜಾಬ್ ಪ್ರಕರಣ ಆರಂಭವಾಗಿದ್ದೆ 2022ರಲ್ಲಿ. ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗೆ ಬರುವುದಕ್ಕೆ ಉಡುಪಿಯ ಪಿಯು ಕಾಲೇಜಿನಲ್ಲಿ ಅವಕಾಶ ನಿರಾಕರಿಸಲಾಗಿತ್ತು. ಇದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು. ಆ ಬಳಿಕ 2022 ಫೆಬ್ರವರಿ 5ರಂದು ಬಸವರಾಜ್ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಹಿಜಾಬ್ ನಿಷೇಧಿಸಿ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಸುದೀರ್ಘ ವಿಚಾರಣೆಯನ್ನು ನಡೆಸಿದ ಹೈಕೋರ್ಟ್‌ನ ತ್ರಿಸದಸ್ಯ ಪೀಠ ಇಸ್ಲಾಂ ಧರ್ಮದಲ್ಲಿ ಹಿಜಾಬ್ ಧರಿಸುವುದು ಅತ್ಯಗತ್ಯ ಧಾರ್ಮಿಕ ಆಚರಣೆ ಅಲ್ಲ ಎನ್ನುವ ಅಭಿಪ್ರಾಯಪಟ್ಟು, ಸರ್ಕಾರದ ಆದೇಶವನ್ನು ಸಾಂವಿಧಾನಿಕವಾಗಿ ಎತ್ತಿ ಹಿಡಿದಿತ್ತು.

ಹೈಕೋರ್ಟ್ ನೀಡಿದ ಆ ತೀರ್ಪು, ಪರ-ವಿರೋಧ ಚರ್ಚೆಗೆ ಕಾರಣವಾಗಿತ್ತು. ಇಲ್ಲಿಗೆ ಸುಮ್ಮನಾಗದೆ ಈ ಪ್ರಕರಣವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಕರ್ನಾಟಕ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದಂತಹ ಮೇಲ್ಮನವಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಅಕ್ಟೋಬರ್ 2022ರಂದು ಎರಡು ರೀತಿಯ ತೀರ್ಪನ್ನು ನೀಡಿತು. ಈ ಪ್ರಕರಣದ ವಿಚಾರಣೆಯನ್ನು ನಡೆಸಿದ ಅಂದಿನ ನ್ಯಾ. ಹೇಮಂತ್ ಗುಪ್ತ ಮತ್ತು ನ್ಯಾನ್ಯಾ. ಸುಧಾಂಶು ದುಲಿಯಾ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠ ವಿಭಿನ್ನ ತೀರ್ಪನ್ನು ಪ್ರಕಟಿಸಿತ್ತು. ಅದರಲ್ಲಿ ನ್ಯಾ. ಹೇಮಂತ್ ಗುಪ್ತಾ ಅವರು ರಾಜ್ಯ ಹೈಕೋರ್ಟ್ ತೀರ್ಪನ್ನು ಎತ್ತಿ ಹಿಡಿದರೆ, ನ್ಯಾ. ಸುಧಾಂಶು ದುಲಿಯಾ ಅವರು ಹಿಜಾಬ್ ಧರಿಸುವುದು ಅವರ ವೈಯಕ್ತಿಕ ಆಯ್ಕೆಗೆ ಬಿಟ್ಟಿದ್ದು ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಯಾವುದೇ ಅಡೆತಡೆ ಇರಬಾರದು ಎಂದು ಹೇಳುವ ಮೂಲಕ ಸರ್ಕಾರದ ನಿಷೇಧವನ್ನು ರದ್ದುಗೊಳಿದ್ದರು.

ಸುಪ್ರೀಂ ಕೋರ್ಟ್‌ನ ಇಬ್ಬರು ನ್ಯಾಯಾಧೀಶರ ತೀರ್ಪು ವಿಭಿನ್ನವಾಗಿದ್ದರಿಂದ, ಈ ಪ್ರಕರಣದ ಅಂತಿಮ ತೀರ್ಮಾನಕ್ಕಾಗಿ ಸುಪ್ರೀಂ ಕೋರ್ಟ್‌ನ ವಿಸ್ತೃತ ಪೀಠಕ್ಕೆ ವರ್ಗಾಯಿಸಲಾಗಿತ್ತು. ಅಲ್ಲಿಂದ ಇಲ್ಲಿಯ ತನಕವೂ ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಉಳಿದಿದೆ. ಈ ನಡುವೆಯೇ ರಾಜ್ಯ ಸರ್ಕಾರದ ಈ ತೀರ್ಮಾನ ಹೊರಬಿದ್ದಿದೆ. ರಾಜ್ಯ ಸರ್ಕಾರದ ಆದೇಶವು ಎಲ್ಲರಿಗೂ ಮುಕ್ತವಾಗಿ ಶಿಕ್ಷಣವನ್ನು ಸಿಗವಂತೆ ಮಾಡುವ ಜೊತೆಗೆ, ರಾಜಕೀಯವಾಗಿ ಮತ್ತು ಕಾನೂನಾತ್ಮಕವಾಗಿ ಬಹಳ ಮಹತ್ವದ ನಿರ್ಣಯವಾಗಿದೆ.

ಬಿಜೆಪಿ ಸರ್ಕಾರ 2022ರಲ್ಲಿ ತೆಗೆದುಕೊಂಡಿದ್ದ ಆದೇಶದಿಂದ, ಅನೇಕ ವಿದ್ಯಾರ್ಥಿನಿಯರು ಶಿಕ್ಷಣವನ್ನು ಮೊಟಕುಗೊಳಿಸಿದ್ದರು. ಇದಲ್ಲದೇ ಅನೇಕರು ಪರೀಕ್ಷೆಗೆ ಹಾಜರಾಗಲೂ ಹಿಂದೇಟನ್ನು ಹಾಕಿದ್ದರು. ಈ ಎಲ್ಲಾ ಗೊಂದಲಗಳಿಗೆ ಸರ್ಕಾರ ಈಗ ತೆರವು ಎಳೆದಿದ್ದು, ವೈಯಕ್ತಿಕ ಸ್ವಾತಂತ್ರ ಮತ್ತು ಸಾಂವಿಧಾನಿಕ ಹಕ್ಕುಗಳನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಈ ತೀರ್ಮಾನವನ್ನು ಕೈಗೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದೆ.

ಆದರೆ ಬಿಜೆಪಿಯವರು ಯಥಾ ಪ್ರಕಾರ ರಾಜ್ಯ ಸರ್ಕಾರದ ತೀರ್ಮಾನವನ್ನು ಟೀಕಿಸುತ್ತಾರೆ. ವಿರೋಧ ಪಕ್ಷದಲ್ಲಿ ಕೂತು ಟೀಕಿಸುವುದು ಅವರ ಹಕ್ಕು. ಆದರೂ ಬಿಜೆಪಿಯವರು ಎಲ್ಲರನ್ನೂ ಒಳಗೊಳ್ಳುವ ವಿಚಾರ ಬಂದಾಗಲೂ, ಎಂದಿನಂತೆ ಮುಸ್ಲಿಂ ದ್ವೇಷಿ ರಾಜಕಾರಣವನ್ನು ಮೆರೆಯುತ್ತಾರೆ.

ಎಲ್ಲರನ್ನೂ ಒಳಗೊಳ್ಳುವ ಇವ ನಮ್ಮವ, ಇವ ನಮ್ಮವ ಎಂದ ಬಸವಣ್ಣನವರ ನಾಡಿನಲ್ಲಿ, ಬಿಜೆಪಿಯವರು ದಿನಬೆಳಗಾದರೆ ಕೋಮು ದ್ವೇಷದವನ್ನೇ ಬಿತ್ತುತ್ತಿದ್ದಾರೆ. ಬಿಜೆಪಿಯವರು ನೀಡುವ ಪ್ರಚೋದನೆಗೆ ಬಲಿಯಾಗಿದ್ದು ಮಾತ್ರ, ಅಮಾಯಕ ವಿದ್ಯಾರ್ಥಿಗಳು. ಅದರಲ್ಲೂ ಈ ಹಿಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಅಧಿಕಾರಕ್ಕೆ ಬಂದ ನಂತರವಂತೂ, ಪ್ರತಿದಿನ ರಾಜ್ಯದಲ್ಲಿ ಕೋಮು ಘಟನೆಗಳಿಗೆ ಪ್ರಚೋದಿಸುವ ಕೆಲಸವೇ ಹೆಚ್ಚಾಗಿ ನಡೆದಿತ್ತು.

ನಿಮಗೆಲ್ಲ ನೆನಪಿರಬಹುದು, ಈ ರಾಜ್ಯದಲ್ಲಿ ಹಿಜಾಬ್ ವರ್ಸಸ್ ಕೇಸರಿ ಶಾಲು ಎಂಬ ಘಟನೆ ನಡೆದಿದ್ದೆ ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ. ಈ ಘಟನೆಯ ಜೊತೆಗೆ ಮತೀಯ ಗೂಂಡಾಗಿರಿ, ಮತಾಂತರ ನಿಷೇಧ ಕಾನೂನು, ಮುಸ್ಲಿಂ ಸಮುದಾಯದ ವ್ಯಾಪಾರಿಗಳನ್ನು ಹೊರಗಿಡುವ ಚರ್ಚೆ, ಪಠ್ಯಪುಸ್ತಕ ಕೇಸರೀಕರಣ, ಮಸೂದ್, ಹರ್ಷ, ಪ್ರವೀಣ್, ಫಾಸಿಲ್ ಕೊಲೆ, ಕೋಮುದ್ವೇಷಿ ಸಾವರ್ಕರ್ ವೈಭವೀಕರಣ, ಈದ್ಗಾ ಮೈದಾನಗಳಲ್ಲಿ ಗಣಪತಿ ಉತ್ಸವ, ಹಲಾಲ್ ಕಟ್, ಜಟ್ಕಾ ಕಟ್, ಉರಿಗೌಡ ನಂಜೇಗೌಡ ವಿವಾದ, ಹೀಗೆ ಒಂದೇ ಎರಡೇ? ಸಮುದಾಯಗಳ ನಡುವೆ ಸಂಘರ್ಷ ಸೃಷ್ಟಿಸುವ ವಿಕೃತಿಯನ್ನು ಬೊಮ್ಮಾಯಿ ಸರ್ಕಾರ ಮೆರೆದಿತ್ತು. ಇವರಿಗೆ ಸಂಘಪರಿವಾರದ ಆದೇಶ ಇತ್ತೋ ಏನೋ?

ಈಗ ರಾಜ್ಯ ಸರ್ಕಾರದ ನಿರ್ಧಾರ ಹೊರಬಿದ್ದ ತಕ್ಷಣ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಅವರು ಪ್ರತಿಕ್ರಿಯಿಸಿ, ದಾವಣಗೆರೆ ಉಪಚುನಾವಣೆ ಸುತ್ತ ನಡೆದ ಘಟನೆಗಳ ನಂತರ ಮುಸ್ಲಿಮರ ಆಕ್ರೋಶಕ್ಕೆ ಬೆದರಿರುವ ಕಾಂಗ್ರೆಸ್ ಸರ್ಕಾರ, ಹಿಜಾಬ್ ಎನ್ನುವ ಅಸ್ತ್ರವನ್ನು ಕೈಗೆತ್ತಿಕೊಂಡಿದೆ. ಶಾಲಾ-ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿ 2022ರಲ್ಲಿ ಅಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ವಸ್ತ್ರ ಸಂಹಿತೆಯನ್ನು, ಸಿದ್ದರಾಮಯ್ಯ ಸರ್ಕಾರ ಗಾಳಿಗೆ ತೂರಿ ಒಂದು ಸಮುದಾಯವನ್ನು ಓಲೈಕೆಗೆ ಮುಂದಾಗಿರುವುದು ಯಾವ ಸೀಮೆಯ ಜಾತ್ಯತೀತತೆ ಎಂದು ಪ್ರಶ್ನಿಸಿದ್ದಾರೆ.

ಮುಂದುವರೆದು ಹಿಜಾಬ್‌ಗೆ ಹಸಿರು ನಿಶಾನೆ ತೋರಿರುವ ಸರ್ಕಾರ, ಕೇಸರಿ ಶಾಲಿಗೆ ನಿಷೇಧ ಹೇರಿದೆ ಅಂತ ಹೇಳಿದ್ದಾರೆ. ಅಶೋಕ್ ಅವರು, ರಾಜ್ಯ ಸರ್ಕಾರದ ಆದೇಶವನ್ನು ಸರಿಯಾಗಿ ಗಮನಿಸಿಲ್ಲ ಅನ್ನಿಸುತ್ತದೆ. ಕೇವಲ ಹಿಜಾಬ್ ಮಾತ್ರವಲ್ಲ, ಜನಿವಾರವನ್ನೂ ಧರಿಸಲು ಅವಕಾಶವನ್ನು ಮಾಡಿಕೊಡಲಾಗಿದೆ. ಇದರ ಬಗ್ಗೆ ಅಶೋಕ್ ಅವರು ಯಾಕೆ ಪ್ರಶ್ನಿಸುವುದಿಲ್ಲ?

ಬಿಜೆಪಿಯವರು ಕೊಡುವ ಹೇಳಿಕೆಯಲ್ಲಿ ಯಾವಾಗಲೂ ದ್ವಂದ್ವ ನಿಲುವು ತಳೆಯುವುದು ಯಾಕೆ? ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರ ಮುಸ್ಲಿಮರಿಗೆ ಅನ್ಯಾಯ ಮಾಡಿದೆ ಎಂದು ಬಾಯಿ ಬಡಿದುಕೊಂಡ ಬಿಜೆಪಿ ಅವರು, ನಿಮ್ಮ ಪಕ್ಷದಲ್ಲಿ ಎಷ್ಟು ಮುಸ್ಲಿಮರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ? ನಿಮ್ಮ ಪಕ್ಷದ ಅಭ್ಯರ್ಥಿ ಮತ್ತು ದಾವಣಗೆರೆ ಉಪಚುನಾವಣೆ ಪ್ರಚಾರಕ್ಕೆ ಬಂದಿದ್ದ ಬಹುತೇಕ ನಾಯಕರು ಕಾಂಗ್ರೆಸ್ ನಿಮಗೆ (ಮುಸ್ಲಿಂ ಸಮುದಾಯಕ್ಕೆ) ಅನ್ಯಾಯ ಮಾಡಿದೆ. ಬಿಜೆಪಿ ನಿಮ್ಮನ್ನು ಒಳಗೊಳ್ಳುತ್ತದೆ. ಹಿಂದೂಗಳಿಗೆ ಮಾತ್ರವಲ್ಲ ಎಲ್ಲರನ್ನೂ ಒಳಗೊಳ್ಳುವವರು ಅಭ್ಯರ್ಥಿ ಎಂದು ಘೋಷಿಸಿದ್ದರು.

ಈಗ ಶಿಕ್ಷಣದ ವಿಚಾರದಲ್ಲಿ, ಮುಕ್ತವಾಗಿ ಕಲಿಯುವ ಅವಕಾಶವನ್ನು ಮಾಡಿಕೊಡಲು ರಾಜ್ಯ ಸರ್ಕಾರ ತೆಗೆದುಕೊಂಡಿರುವಾಗ ತೀರ್ಮಾನವನ್ನು ಟೀಕಿಸುತ್ತಿರುವುದರ ಹಿಂದೆ ನಿಮ್ಮ ಮುಸ್ಲಿಂ ದ್ವೇಷಿ ನಡೆ ಸ್ಪಷ್ಟವಾಗಿ ಕಾಣುತ್ತಿದೆ.

ಇದೇ ಬಿಜೆಪಿ ನಾಯಕರು ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆದಿದ್ದಕ್ಕೆ ಬೀದಿ ನಾಟಕಗಳನ್ನು ಮಾಡಿ, ಹಿಂದುಗಳಿಗೆ ಅನ್ಯಾಯವಾಗುತ್ತಿದೆ ಎಂದರು. ಆದರೆ ಕಳೆದ ವಾರ ನಡೆದ ನೀಟ್ ಪರೀಕ್ಷೆಯ ಪೇಪರ್ ಲೀಕ್ ಬಗ್ಗೆ ಮಾತನಾಡುತ್ತಲೇ ಇಲ್ಲ. ನೀಟ್ ಪರೀಕ್ಷೆ ರದ್ದಾಗಿದ್ದರಿಂದ ಲಕ್ಷಾಂತರ ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಯ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲ ಎನ್ನುವುದು ಸ್ಪಷ್ಟವಾಗುತ್ತಿದೆ.

ಹಿಜಾಬ್‌ಗೆ ಅವಕಾಶ ಕೊಟ್ಟಿರುವುದು ದೊಡ್ಡ ಅಪರಾಧವೆಂಬಂತೆ ಬಿಂಬಿಸುತ್ತಿರುವವರು, ಜನಿವಾರಕ್ಕೆ ಅವಕಾಶ ಕೊಟ್ಟಿರುವ ಬಗ್ಗೆ ಯಾಕೆ ಟೀಕಿಸುತ್ತಿಲ್ಲ. ಶಿಕ್ಷಣದ ವಿಚಾರದಲ್ಲಿ ಬಿಜೆಪಿ ನಾಯಕರು ರಾಜಕೀಯ ಮಾಡುವುದನ್ನು ನಿಲ್ಲಿಸಬೇಕು. ಸಂವಿಧಾನದ ಪ್ರಕಾರ ಎಲ್ಲರಿಗೂ ಸಮಾನ ಶಿಕ್ಷಣ ಸಿಗಬೇಕು. ಅದರಂತೆ ಅವರವರ ಧರ್ಮವನ್ನು ಅನುಸರಿಸುವುದು ಕೂಡ ಸಂವಿಧಾನ ನಮಗೆ ಕಲ್ಪಿಸಿಕೊಟ್ಟಿರುವ ಅವಕಾಶ.

ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬೇಟಿ ಬಚಾವೋ, ಬೇಟಿ ಪಡಾವೋ ಎನ್ನುವ ಕಾರ್ಯಕ್ರಮವನ್ನು ಜಾರಿಗೆ ತರುತ್ತಾರೆ. ಇದರ ಮೂಲಕ ಹೆಣ್ಣುಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುವ ಮಾತನಾಡುತ್ತಾರೆ. ಆದರೆ ರಾಜ್ಯದಲ್ಲಿ ಅವರದೇ ಪಕ್ಷದ ನಾಯಕರು ಬೇಟಿ ಪಡಾವೋ (ಹೆಣ್ಣು ಮಕ್ಕಳ ಶಿಕ್ಷಣ) ವಿರೋಧಿಸುತ್ತಾರೆ. ಬಿಜೆಪಿ ನಾಯಕರು ದ್ವಂದ್ವ ನಿಲುವಿನಿಂದ ಹೊರಬರಬೇಕಿದೆ. ಹೆಣ್ಣುಮಕ್ಕಳಿಗೆ ಶಿಕ್ಷಣ ಸಿಗುವ ಬಗ್ಗೆ ಚಿಂತಿಸಬೇಕಿದೆ. ವಿಶೇಷವಾಗಿ ಶಿಕ್ಷಣದ ವಿಚಾರದಲ್ಲಿ ಕೋಮುದ್ವೇಷವನ್ನು ನಿಲ್ಲಿಸಬೇಕಿದೆ.

ನೀಟ್ ಹಗರಣ: ಜೈಪುರದಲ್ಲಿ ಬಂಧಿತನ ಸ್ಫೋಟಕ ಹೇಳಿಕೆ, ಅಜ್ಞಾತ ಪ್ರಭಾವಿ ಯಾರು?

ಜೈಪುರದಲ್ಲಿ ಬಂಧಿತನಾದ ಈ ಪ್ರಮುಖ ಆರೋಪಿಯು ರಾಜಸ್ಥಾನದ ಪ್ರಖ್ಯಾತ ಕೋಚಿಂಗ್ ಸೆಂಟರ್‌ಗಳು ಮತ್ತು ನಕಲಿ ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರಕ್ಕೆ ಕದ್ದುಮುಚ್ಚಿ ಕಳುಹಿಸುವ ಬೃಹತ್ ಜಾಲದ ಪ್ರಮುಖ ಕೊಂಡಿಯಾಗಿದ್ದನು. ಈತ ತೀವ್ರ ವಿಚಾರಣೆ ವೇಳೆ, ತನಗೆ ಮೇಲಿನಿಂದ ಬರುತ್ತಿದ್ದ ನಿರ್ದಿಷ್ಟ ಆದೇಶಗಳನ್ನು ಮಾತ್ರ ತಾನು ಪಾಲಿಸುತ್ತಿದ್ದೆ. ಆ ಪ್ರಭಾವಿಗಳ ಹೆಸರು ಬಾಯ್ಬಿಟ್ಟರೆ ತನ್ನ ಜೀವಕ್ಕೆ ಅಪಾಯವಿದೆ ಎಂದು ತಿಳಿಸಿದ್ದಾನೆ

ವೈದ್ಯಕೀಯ ಶಿಕ್ಷಣ ಪ್ರವೇಶಾತಿಯ ಅತ್ಯಂತ ಮಹತ್ವದ ಮತ್ತು ನಿರ್ಣಾಯಕ ಪರೀಕ್ಷೆಯಾದ ನೀಟ್ ಹಗರಣವು ದಿನಕ್ಕೊಂದು ಹೊಸ ತಿರುವು ಪಡೆಯುತ್ತಿದ್ದು, ಇಡೀ ದೇಶಾದ್ಯಂತ ತೀವ್ರ ಸಂಚಲನ ಸೃಷ್ಟಿಸಿದೆ. ಇತ್ತೀಚಿಗೆ ರಾಜಸ್ಥಾನದ ಜೈಪುರದಲ್ಲಿ ಪೊಲೀಸರ ಬಲೆಗೆ ಬಿದ್ದಿರುವ ಪ್ರಮುಖ ಆರೋಪಿಯೊಬ್ಬ ತನಿಖಾಧಿಕಾರಿಗಳ ವಿಚಾರಣೆ ವೇಳೆ ನೀಡಿರುವ ಸ್ಫೋಟಕ ಹೇಳಿಕೆಯು ಎಲ್ಲರ ನಿದ್ದೆಗೆಡಿಸಿದೆ. ''ನಾನು ಕೇವಲ ಸಣ್ಣ ಮೀನು, ಈ ಹಗರಣದ ಅಸಲಿ ರೂವಾರಿಗಳಾದ ಪ್ರಭಾವಿಗಳ ರಕ್ಷಣೆ ಮಾಡಲಾಗುತ್ತಿದೆ'' ಎಂಬ ಆತನ ಕರಾರುವಕ್ಕಾದ ಹೇಳಿಕೆಯು, ಹಗರಣದ ಬೇರುಗಳು ಎಷ್ಟೊಂದು ಆಳವಾಗಿದೆ ಎಂಬುದನ್ನು ಬೆತ್ತಲು ಮಾಡಿದೆ. ಈ ಸ್ಪಷ್ಟ ಹೇಳಿಕೆಯು ನೀಟ್ ಪರೀಕ್ಷಾ ಅಕ್ರಮದಲ್ಲಿ ಬಲಾಢ್ಯರ ಕೈವಾಡವಿರುವ ಅನುಮಾನವನ್ನು ಮತ್ತಷ್ಟು ಬಲಪಡಿಸಿದೆ.

ಬಂಧಿತ ಆರೋಪಿ ಉಲ್ಲೇಖಿಸುತ್ತಿರುವ ಆ ನಿಗೂಢ ''ಪ್ರಭಾವಿ'' ಯಾರು ಎಂಬುದು ಸದ್ಯದ ಬಹುದೊಡ್ಡ ಮತ್ತು ಜಟಿಲವಾದ ಪ್ರಶ್ನೆಯಾಗಿದೆ. ಕೆಲವು ಮೂಲಗಳ ಪ್ರಕಾರ, ಆ ಪ್ರಭಾವಿ ವ್ಯಕ್ತಿಯು ರಾಜಕೀಯ ವಲಯದ ಪ್ರಮುಖ ನಾಯಕರಾಗಿರಬಹುದು ಅಥವಾ ಕೋಟ್ಯಂತರ ರೂಪಾಯಿ ವಹಿವಾಟು ನಡೆಸುವ ದೊಡ್ಡ ಮಟ್ಟದ ಕೋಚಿಂಗ್ ಮಾಫಿಯಾದ ಪಿತಾಮಹನಾಗಿರಬಹುದು ಎಂದು ದಟ್ಟವಾಗಿ ಶಂಕಿಸಲಾಗಿದೆ. ಜೈಪುರ, ಪಾಟ್ನಾ ಮತ್ತು ಲಾತೂರ್‌ಗಳಂತಹ ನಗರಗಳಲ್ಲಿ ವ್ಯವಸ್ಥಿತವಾಗಿ ಹರಡಿರುವ ಈ ಜಾಲವು ಕೇವಲ ಸಣ್ಣಪುಟ್ಟ ಮಧ್ಯವರ್ತಿಗಳಿಂದ ಮಾತ್ರ ನಡೆಯಲು ಖಂಡಿತಾ ಸಾಧ್ಯವಿಲ್ಲ. ಉನ್ನತ ಮಟ್ಟದ ರಾಜಕೀಯ ಅಥವಾ ಆಡಳಿತಾತ್ಮಕ ಬೆಂಬಲವಿಲ್ಲದೆ ಇಷ್ಟು ದೊಡ್ಡಮಟ್ಟದ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ನಕಲಿ ಅಭ್ಯರ್ಥಿಗಳ ಜಾಲವನ್ನು ಯಶಸ್ವಿಯಾಗಿ ನಿರ್ವಹಿಸಲು ಅಸಾಧ್ಯವೆಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ.

ಜೈಪುರದಲ್ಲಿ ಬಂಧಿತನಾದ ಈ ಪ್ರಮುಖ ಆರೋಪಿಯು ರಾಜಸ್ಥಾನದ ಪ್ರಖ್ಯಾತ ಕೋಚಿಂಗ್ ಸೆಂಟರ್‌ಗಳು ಮತ್ತು ನಕಲಿ ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರಕ್ಕೆ ಕದ್ದುಮುಚ್ಚಿ ಕಳುಹಿಸುವ ಬೃಹತ್ ಜಾಲದ ಪ್ರಮುಖ ಕೊಂಡಿಯಾಗಿದ್ದನು. ಈತ ತೀವ್ರ ವಿಚಾರಣೆ ವೇಳೆ, ತನಗೆ ಮೇಲಿನಿಂದ ಬರುತ್ತಿದ್ದ ನಿರ್ದಿಷ್ಟ ಆದೇಶಗಳನ್ನು ಮಾತ್ರ ತಾನು ಪಾಲಿಸುತ್ತಿದ್ದೆ. ಆ ಪ್ರಭಾವಿಗಳ ಹೆಸರು ಬಾಯ್ಬಿಟ್ಟರೆ ತನ್ನ ಜೀವಕ್ಕೆ ಅಪಾಯವಿದೆ ಹಾಗೂ ಬೆದರಿಕೆ ಕರೆಗಳು ಬರುತ್ತಿವೆ ಎಂಬ ಆತಂಕವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾನೆ ಎನ್ನಲಾಗಿದೆ. ಈತ ನೀಡಿದ ಸೂಕ್ಷ್ಮ ಸುಳಿವುಗಳು ತನಿಖಾಧಿಕಾರಿಗಳನ್ನು ದೊಡ್ಡ ಕುಳಗಳತ್ತ ಕೊಂಡೊಯ್ಯುತ್ತಿವೆಯಾದರೂ, ನಿಖರವಾದ ಹೆಸರುಗಳನ್ನು ಬಹಿರಂಗಪಡಿಸಲು ಆತ ನಿರಂತರವಾಗಿ ನಿರಾಕರಿಸುತ್ತಿರುವುದು ಈ ಪ್ರಕರಣದ ನಿಗೂಢತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ರಾಜಸ್ಥಾನದಲ್ಲಿ ಈ ಹಿಂದೆಯೂ ಕೂಡ ಹಲವು ಪ್ರತಿಷ್ಠಿತ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ ಹಗರಣಗಳು ನಿರಂತರವಾಗಿ ನಡೆದಿವೆ. ಈ ಹಳೆಯ ಪೇಪರ್ ಲೀಕ್ ಮಾಫಿಯಾಗಳ ನಾಯಕರು ಈಗ ನೀಟ್ ಹಗರಣದಲ್ಲೂ ತಮ್ಮ ಕರಾಳ ಜಾಲವನ್ನು ವಿಸ್ತರಿಸಿರುವ ಸಾಧ್ಯತೆ ದಟ್ಟವಾಗಿದೆ. ಬಂಧಿತ ಆರೋಪಿಯು ಇದೇ ಹಳೆಯ ಪೇಪರ್ ಲೀಕ್ ಮಾಫಿಯಾದ ಪ್ರಭಾವಿ ನಾಯಕರೊಬ್ಬರ ಬಗ್ಗೆ ಅಥವಾ ಆ ಮಾಫಿಯಾಗೆ ರಾಜಾರೋಷವಾಗಿ ರಕ್ಷಣೆ ನೀಡುತ್ತಿರುವ ಉನ್ನತ ಮಟ್ಟದ ಸರ್ಕಾರಿ ಅಧಿಕಾರಿಯ ಬಗ್ಗೆ ಮಾತನಾಡುತ್ತಿರಬಹುದು ಎಂದು ಪೊಲೀಸ್ ವಲಯದಲ್ಲಿ ತೀವ್ರವಾಗಿ ಚರ್ಚೆಯಾಗುತ್ತಿದೆ.

ಪ್ರಶ್ನೆಪತ್ರಿಕೆ ಸೋರಿಕೆ, ಗ್ರೇಸ್ ಮಾರ್ಕ್ಸ್ ವಿವಾದ ಮತ್ತು ನಕಲಿ ಅಭ್ಯರ್ಥಿಗಳ ಜಾಲ- ಹೀಗೆ ಬಹುಮುಖಿ ಆಯಾಮಗಳನ್ನು ಹೊಂದಿರುವ ಈ ಬೃಹತ್ ಹಗರಣದ ತನಿಖೆಯನ್ನು ಕೇಂದ್ರ ತನಿಖಾ ದಳ ಇದೀಗ ಮತ್ತಷ್ಟು ಚುರುಕುಗೊಳಿಸಿದೆ. ಜೈಪುರದ ಬಂಧಿತ ಆರೋಪಿಯ ಹೇಳಿಕೆಯ ನಿಖರ ಆಧಾರದ ಮೇಲೆ, ಸ್ಥಳೀಯ ಪೊಲೀಸರು ಮತ್ತು ಸಿಬಿಐ ಅಧಿಕಾರಿಗಳು ಆತನ ಬ್ಯಾಂಕ್ ಖಾತೆಗಳ ವ್ಯವಹಾರಗಳು, ಡಿಜಿಟಲ್ ಸಾಕ್ಷ್ಯಗಳು ಮತ್ತು ಕಾಲ್ ಲಾಗ್‌ಗಳನ್ನು ತೀವ್ರವಾಗಿ ಪರಿಶೀಲಿಸುತ್ತಿದ್ದಾರೆ. ಈ ಜಾಲದಲ್ಲಿ ಕೋಟ್ಯಂತರ ರೂಪಾಯಿಗಳ ಅಕ್ರಮ ಹಣಕಾಸು ವಹಿವಾಟು ನಡೆದಿರುವುದು ಪತ್ತೆಯಾಗಿದ್ದು, ಈ ಹಣದ ಹರಿವು ಅಂತಿಮವಾಗಿ ಯಾರತ್ತ ಸಾಗಿದೆ ಎಂಬುದೇ ಆ ''ಪ್ರಭಾವಿ''ಯನ್ನು ಪತ್ತೆಹಚ್ಚುವ ಪ್ರಮುಖ ಅಸ್ತ್ರವಾಗಿದೆ.

ಈ ಹಗರಣದ ಹಿಂದಿರುವ ಅಗಾಧವಾದ ಆರ್ಥಿಕ ಮತ್ತು ರಾಜಕೀಯ ಶಕ್ತಿಯನ್ನು ಬೇಧಿಸುವುದು ಈಗ ತನಿಖಾ ಸಂಸ್ಥೆಗಳ ಮುಂದಿರುವ ಅತಿದೊಡ್ಡ ಮತ್ತು ಕಠಿಣ ಸವಾಲಾಗಿದೆ. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ () ವ್ಯವಸ್ಥೆಯೊಳಗಿನ ಕೆಲವು ಭ್ರಷ್ಟ ಅಧಿಕಾರಿಗಳ ಕೃಪಾಕಟಾಕ್ಷವಿಲ್ಲದೆ, ಜೈಪುರದಂತಹ ಪ್ರಮುಖ ನಗರದ ಪರೀಕ್ಷಾ ಕೇಂದ್ರಗಳಲ್ಲಿ ಇಂತಹ ಅಕ್ರಮ ನಿರಂತರವಾಗಿ ನಡೆಯಲು ಸಾಧ್ಯವೇ ಇಲ್ಲ. ಹೀಗಾಗಿ, ಬಂಧಿತ ಆರೋಪಿ ಪದೇ ಪದೇ ಹೇಳುತ್ತಿರುವ ಆ ಪ್ರಭಾವಿಯು ಎನ್‌ಟಿಎಯ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಯೇ, ಆಡಳಿತಶಾಹಿಯ ಭಾಗವೇ ಅಥವಾ ಶಿಕ್ಷಣ ಇಲಾಖೆಯನ್ನೇ ತೆರೆಯ ಹಿಂದಿನಿಂದ ನಿಯಂತ್ರಿಸುವ ರಾಜಕೀಯ ಶಕ್ತಿಯೇ ಎಂಬ ನಿಟ್ಟಿನಲ್ಲಿಯೂ ಸಿಬಿಐ ತನಿಖೆ ಚುರುಕಾಗಿ ಮುಂದುವರಿದಿದೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR